ವಿಜಯಪುರ | ಸಂಪುಟ 04 | ಸಂಚಿಕೆ 232 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ನವೆಂಬರ್ 08, 2026

"ಎಚ್.ಡಿ.ಕುಮಾರಸ್ವಾಮಿ ಅವರಿಗೆ ಅಧಿಕಾರ ಇಲ್ಲದಾಗ ಹಳ್ಳಿಯ ಹಟ್ಟಿ ಜಪ ಮಾಡುತ್ತಾರೆ. ಅಧಿಕಾರವಿದ್ದಾಗ ತಾಜ್ ವೆಸ್ಟೆಂಡ್‌ನ ವಿಲಾಸಿ ಜೀವನ ಆಕರ್ಷಿಸುತ್ತದೆ. ಹಳ್ಳಿಗರ ನಂಬಿಕೆ, ಅಮಾಯಕತೆಯನ್ನು ಬಂಡವಾಳ ಮಾಡಿಕೊಂಡು ಮೊಸಳೆ ಕಣ್ಣೀರು ಸುರಿಸುತ್ತಾ ಮಂಕುಬೂದಿ ಎರಚುವ ಅವರ ಸೀರಿಯಲ್ ನಾಟಕ ನಂಬುವುದಕ್ಕೆ ಹಳ್ಳಿಗರು ಮೂರ್ಖರಲ್ಲ."



■ ಪ್ರಿಯಾಂಕ್ ಖರ್ಗೆ
ಗೃಹ ಸಚಿವರು



ಯಾಸೀನ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಸಮೀರ್ ಮುಲ್ಲಾ ಕಾಲಿಗೆ ಪೊಲೀಸರ ಗುಂಡೇಟು

ವಿಜಯಪುರದಲ್ಲಿ ಮತ್ತೆ ಗುಂಡಿನ ಮೊರೆತ!

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯಲ್ಲಿ ಮತ್ತೊಮ್ಮೆ ಗುಂಡಿನ ಸದ್ದು ಮೊಳಗಿದೆ. ಯಾಸೀನ್ ಜುಬೇರ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಸಮೀರ್ ಮುಲ್ಲಾ ಮೇಲೆ ಪೊಲೀಸರು ಫೈರಿಂಗ್ ನಡೆಸಿ ಬಂಧಿಸಿದ್ದಾರೆ.

ಶನಿವಾರ ಬೆಳ್ಳಂಬೆಳಿಗ್ಗೆ ವಿಜಯಪುರ ಜಿಲ್ಲೆಯ ಅತಾಲಟ್ಟಿ ಗ್ರಾಮದ ಬಳಿ ಈ ಘಟನೆ ನಡೆದಿದೆ. ಆರೋಪಿಯನ್ನು ಬಂಧಿಸಲು ತೆರಳಿದ್ದ ಪೊಲೀಸರ ಮೇಲೆ ಸಮೀರ್ ಮುಲ್ಲಾ ಹಲ್ಲೆಗೆ ಯತ್ನಿಸಿದ್ದಾನೆ ಎನ್ನಲಾಗಿದೆ. ಈ ವೇಳೆ ಆತ್ಮರಕ್ಷಣೆಗಾಗಿ ಪೊಲೀಸರು ಆತನ ಕಾಲಿಗೆ ಗುಂಡು ಹಾರಿಸಿದ್ದಾರೆ.

ನವೆಂಬರ್ 5ರಂದು ಮುಂಡೆವಾಡಿ ಆಸ್ಪತ್ರೆಯ ಎದುರು ಯಾಸೀನ್ ಜುಬೇರ್ ಮೇಲೆ ಸಮೀರ್ ಮುಲ್ಲಾ ಗುಂಡಿನ ದಾಳಿ ನಡೆಸಿದ್ದ ಎನ್ನಲಾಗಿದೆ. ಪತ್ನಿಯನ್ನು ಆಸ್ಪತ್ರೆಗೆ ಕರೆತಂದಿದ್ದ ಯಾಸೀನ್, ಆಕೆಯ ಕಣ್ಣೆದುರೇ ಗುಂಡೇಟಿಗೆ ಬಲಿಯಾಗಿದ್ದರು. ಗುಂಡಿನ ದಾಳಿಯಲ್ಲಿ ಯಾಸೀನ್ ಸ್ಥಳದಲ್ಲೇ ಮೃತಪಟ್ಟಿದ್ದರು.

ಘಟನೆಯ ಬಳಿಕ ಆರೋಪಿ ಸಮೀರ್ ಮುಲ್ಲಾ ಪರಾರಿಯಾಗಿದ್ದ. ಆತನ ಹಾಗೂ ಸಹಚರರ ಪತ್ತೆಗಾಗಿ ಪೊಲೀಸರು ನಾಲ್ಕು ವಿಶೇಷ ತಂಡಗಳನ್ನು ರಚಿಸಿದ್ದರು.

ಇದೀಗ ಅತಾಲಟ್ಟಿ ಗ್ರಾಮದ ಬಳಿ ಸಮೀರ್ ಇರುವ ಖಚಿತ ಮಾಹಿತಿ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ಪೊಲೀಸರ ಮೇಲೆ ದಾಳಿ ಮಾಡಲು ಯತ್ನಿಸಿದಾಗ ಆತನ ಕಾಲಿಗೆ ಗುಂಡು ಹಾರಿಸಲಾಗಿದೆ.ಗಾಯಗೊಂಡ ಆರೋಪಿ ಸಮೀರ್ ಮುಲ್ಲಾನನ್ನು ವಿಜಯಪುರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ.

ಯಾಸೀನ್ ಜುಬೇರ್ ಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿಯ ಬಂಧನದೊಂದಿಗೆ ಪೊಲೀಸರ ತನಿಖೆ ಮತ್ತಷ್ಟು ಚುರುಕುಗೊಂಡಿದೆ.

ಆಯೋಗದ ಎಲ್ಲ ನೇಮಕಾತಿ ಪರೀಕ್ಷೆಗಳನ್ನು ಮುಂದೂಡಲು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಗ್ರಹ

ಕೆಪಿಸಿಸಿ ಶುದ್ಧೀಕರಣವಾಗುವರೆಗೂ ಪರೀಕ್ಷೆಗಳನ್ನು ಮುಂದೂಡಿ



ಬೆಂಗಳೂರು: ಕೆಪಿಎಸ್‌ಸಿ ಆಯೋಗವನ್ನು ಸಂಪೂರ್ಣವಾಗಿ ಶುದ್ಧೀಕರಿಸಿ, ಪಾರದರ್ಶಕತೆಯನ್ನು ಮರುಸ್ಥಾಪಿಸುವವರೆಗೂ, ಆಯೋಗವು ನಡೆಸುತ್ತಿರುವ ಎಲ್ಲ ನೇಮಕಾತಿ ಪರೀಕ್ಷೆಗಳನ್ನು ಮುಂದೂಡಬೇಕೆಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಶನಿವಾರ ಆಗ್ರಹಿಸಿದ್ದಾರೆ.

319 ಗೆಜೆಟೆಡ್ ಪ್ರೊಬೇಷನರ್ (ಏಂಖ) ಹುದ್ದೆಗಳ ನೇಮಕಾತಿಗಾಗಿ ನವೆಂಬರ್ 15 ರಂದು ನಡೆಯಲಿರುವ ಪರೀಕ್ಷೆಯನ್ನು ಮುಂದೂಡುವಂತೆ ಜೆಡಿಎಸ್ ನಾಯಕ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕಳೆದ ಮೂರರಿಂದ ನಾಲ್ಕು ವರ್ಷಗಳಲ್ಲಿ ನಡೆದಿವೆ ಎನ್ನಲಾದ ಪರೀಕ್ಷೆ ಮತ್ತು ನೇಮಕಾತಿ ಅಕ್ರಮಗಳ ಕುರಿತು ಜಾರಿ ನಿರ್ದೇಶನಾಲಯ (ಇಆ) ಹಾಗೂ ಅಪರಾಧ ತನಿಖಾ ಇಲಾಖೆ (ಅಋಆ) ತನಿಖೆ ನಡೆಸುತ್ತಿವೆ ಎಂದು ಅವರು ತಿಳಿಸಿದರು.

ಹೈಕೋರ್ಟ್‌ನ ನಿರ್ದೇಶನದ ಮೇರೆಗೆ, ವಿಶೇಷ ತನಿಖಾ ತಂಡವೊಂದು (ಖಋಖ) ಕೂಡ ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದೆ.

'ನಡೆಯುತ್ತಿರುವ ತನಿಖೆಗಳು ಮತ್ತು ಆರ್ಥಿಕ ವಹಿವಾಟುಗಳಿಗೆ ಸಂಬಂಧಿಸಿದ ಆರೋಪಗಳನ್ನು ಗಮನಿಸಿದರೆ, ಕರ್ನಾಟಕ ಲೋಕಸೇವಾ ಆಯೋಗವು (ಏಖಅ) ಪರೀಕ್ಷೆಗಳನ್ನು ನಡೆಸಿ, ಪಾರದರ್ಶಕ ಹಾಗೂ ನ್ಯಾಯಯುತವಾದ ನೇಮಕಾತಿಗಳನ್ನು ಮಾಡಬಲ್ಲದು ಎಂಬ ಬಗ್ಗೆ ನನಗೆ ಯಾವುದೇ ನಂಬಿಕೆಯಿಲ್ಲ. ಉದ್ಯೋಗಾಕಾಂಕ್ಷಿಗಳು ಕೂಡ ಇದೇ ರೀತಿಯ ಕಳವಳಗಳನ್ನು ವ್ಯಕ್ತಪಡಿಸಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಆಯೋಗದಲ್ಲಿ ಸುಧಾರಣೆಗಳನ್ನು ಸೂಚಿಸಲು ಮಾಜಿ ಸಚಿವ ಆರ್.ವಿ. ದೇಶಪಾಂಡೆ ಅವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ಇನ್ನೂ ತನ್ನ ವರದಿಯನ್ನು ಸಲ್ಲಿಸಿಲ್ಲ. ಅಭ್ಯರ್ಥಿಗಳು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಇಂತಹ ಅನಿಶ್ಚಿತತೆಯ ನಡುವೆ ಪರೀಕ್ಷೆಗಳನ್ನು ನಡೆಸುವುದು ಅರ್ಹ ಮತ್ತು ಪ್ರತಿಭಾವಂತ ಆಕಾಂಕ್ಷಿಗಳಿಗೆ ಮಾಡುವ ಅನ್ಯಾಯವಾಗುತ್ತದೆ ಎಂದು ಅವರು ಹೇಳಿದರು.

'ಕೆಪಿಎಸ್‌ಸಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಶುದ್ಧೀಕರಿಸಿ, ಪಾರದರ್ಶಕತೆಯನ್ನು ಖಚಿತಪಡಿಸಿದ ನಂತರವೇ ನೇಮಕಾತಿ ಪರೀಕ್ಷೆಗಳನ್ನು ನಡೆಸಬೇಕು' ಎಂದು ಅವರು ಆಗ್ರಹಿಸಿದರು.

ಮುಖ್ಯಮಂತ್ರಿಡಿಕೆಶಿವಕುಮಾರ್‌ಅವರ ತವರು ಜಿಲ್ಲೆಯಾದ ರಾಮನಗರದಲ್ಲಿ (ದಕ್ಷಿಣ ಬೆಂಗಳೂರು) ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಿದ ಮತ್ತು ಅಭಿವೃದ್ಧಿಪಡಿಸಿದ ಕೀರ್ತಿಯನ್ನು ತಮಗೆ ಸಲ್ಲಬೇಕು ಎಂದು ಕಾಂಗ್ರೆಸ್ ನಾಯಕರು ಹೇಳಿಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ಅನುಮೋದನೆ



ರಾಮನಗರದಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಕಾರ್ಯಕ್ರಮವೊಂದನ್ನು ಪ್ರಸ್ತಾಪಿಸಿದ ಅವರು, ವೈದ್ಯಕೀಯ ಕಾಲೇಜುಗಳು ಮತ್ತು ಇತರ ಸಂಸ್ಥೆಗಳನ್ನು ಪಕ್ಷದ ನಾಯಕರು ತಮ್ಮದೇ ಸಾಧನೆಗಳೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. 2006ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವನ್ನು ರಾಮನಗರಕ್ಕೆ ಸ್ಥಳಾಂತರಿಸಲು ನಿರ್ಧರಿಸಿ, ಅದಕ್ಕೆ ಅಗತ್ಯವಾದ ಅನುದಾನವನ್ನೂ ಒದಗಿಸಿದ್ದೆ. ಈಗ, ಕಾಂಗ್ರೆಸ್ ನಾಯಕರು ಅದರ ಶ್ರೇಯಸ್ಸನ್ನು ತಾವು ಪಡೆಯುತ್ತಿದ್ದಾರೆ' ಎಂದು ಅವರು ಹೇಳಿದರು.

ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ಕನಕಪುರದಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿತ್ತು ಎಂದೂ ಅವರು ತಿಳಿಸಿದರು.



ವಾಯು ಮಾಲಿನ್ಯ ನಿಯಂತ್ರಣಕ್ಕೆ ಆದ್ಯತೆ ನೀಡಿ

■ ಉದಯರಶ್ಮಿ ದಿನಪತ್ರಿಕೆ

■ **ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ವಾಯು ಮಾಲಿನ್ಯ ನಿಯಂತ್ರಣ ಮಾಸಾಚರಣೆ-2026ಕ್ಕೆ ಚಾಲನೆ | ಪ್ರಾದೇಶಿಕ ಸಾರಿಗೆ ಅಧಿಕಾರಿ ವಸೀಮ್ ಬಾಬಾ ಮುದ್ದೇಬಿಹಾಳ ಹೇಳಿಕೆ**

ವಿಜಯಪುರ: ವಾಹನಗಳಿಂದ ಹೊರಸೂಸುವ ಹೊಗೆವಾಯುಮಾಲಿನ್ಯಕ್ಕೆಪ್ರಮುಖಕಾರಣವಾಗಿದ್ದು, ಅದರ ನಿಯಂತ್ರಣಕ್ಕೆ ವಾಹನ ಮಾಲೀಕರು ಹಾಗೂ ಚಾಲಕರು ಹೆಚ್ಚಿನ ಆದ್ಯತೆ ನೀಡಬೇಕು. ವಾಹನಗಳನ್ನು ನಿಯಮಿತವಾಗಿ ತಪಾಸಣೆಗೊಳಪಡಿಸಿ, ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಪಡೆಯುವ ಮೂಲಕ ಪರಿಸರ ಸಂರಕ್ಷಣೆಗೆ ಸಹಕರಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ವಸೀಮ್ ಬಾಬಾ ಮುದ್ದೇಬಿಹಾಳ ಹೇಳಿದರು.

ನಗರದ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ನ.6ರಂದು ಆಯೋಜಿಸಿದ್ದ ವಾಯು ಮಾಲಿನ್ಯ ನಿಯಂತ್ರಣ ಮಾಸಾಚರಣೆ-2026ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಾಹನಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ತಡೆಗಟ್ಟಲು ಪ್ರತಿಯೊಬ್ಬರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ವಾಹನಗಳ ಸಮರ್ಪಕ ನಿರ್ವಹಣೆ ಹಾಗೂ ಮಾಲಿನ್ಯ ನಿಯಂತ್ರಣ ನಿಯಮಗಳ ಪಾಲನೆಗೆ ಗಮನ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಲಾಯಿತು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ವಾಯು ಮಾಲಿನ್ಯ ನಿಯಂತ್ರಣಾಧಿಕಾರಿ ವಿವೇಕ ಅವರು ವಾಯು ಮಾಲಿನ್ಯ ನಿಯಂತ್ರಣದ ಮಹತ್ವದ ಕುರಿತು ಮಾತನಾಡಿದರು. ಮೋಟಾರು ವಾಹನ ನಿರೀಕ್ಷಕರಾದ ಸಂತೋಷ ಪಾಟೀಲ, ವಾಗೇಶ ಹಿರೇಮಠ, ಕಚೇರಿ ಅಧೀಕ್ಷಕರಾದ ಬಿ.ಕೆ. ಉಮ್ಮಣ್ಣವರ, ವೈ.ಬಿ. ಮೂಡಗಿ, ವಿಜಯಲಕ್ಷ್ಮೀ ಬುಸಾರಿ, ರಾಘವೇಂದ್ರ ಯಡಹಳ್ಳಿ ಸೇರಿದಂತೆ ಕಚೇರಿಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಅಧೀಕ್ಷಕ ಮುತ್ತುರಾಜ್ ಬಿ.ಎನ್. ಕಾರ್ಯಕ್ರಮ ನಿರೂಪಿಸಿದರು. ಪ್ರಥಮ ದರ್ಜೆ ಸಹಾಯಕ ಪಿ.ಆರ್. ನಂದಿಬಿಷ್ಟಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿದರು. ದ್ವಿತೀಯ ದರ್ಜೆ ಸಹಾಯಕ ಎಂ.ಎಸ್. ಇಂಗಳೇಶ್ವರ ಸ್ವಾಗತಿಸಿ, ವಂದಿಸಿದರು.

ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಪೂರ್ವಭಾವಿ ಪರೀಕ್ಷೆ | ನ.15ರಂದು ವಿಜಯಪುರದ 20 ಕೇಂದ್ರಗಳಲ್ಲಿ 8,117 ಅಭ್ಯರ್ಥಿಗಳಿಂದ ಪರೀಕ್ಷೆ | ಡಿಸಿ ಡಾ.ಆನಂದ ಕೆ. ಸೂಚನೆ

ಪರೀಕ್ಷೆ ನಿರ್ವಹಣೆಯಲ್ಲಿ ಲೋಪ ಆಗದಂತೆ ನಿಗಾವಹಿಸಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕ ಲೋಕಸೇವಾ ಆಯೋಗ ನಡೆಸುವ (ಕೆಪಿಎಸ್‌ಸಿ) ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಗಾಗಿ ನವೆಂಬರ್ 15ರಂದು ನಡೆಯಲಿರುವ ಪೂರ್ವಭಾವಿ ಪರೀಕ್ಷೆಯನ್ನು ಅತ್ಯಂತ ಜವಾಬ್ದಾರಿ ಹಾಗೂ ಜಾಗರೂಕತೆಯಿಂದ ನಿರ್ವಹಿಸಬೇಕು. ಯಾವುದೇ ಗೊಂದಲ,ಲೋಪದೋಷ ಅಥ-'ವಾ ಅಹಿತಕರ ಘಟನೆಗೆ ಅವಕಾಶ ನೀಡಬಾರದು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳಿಗೆ ಸೂಚಿಸಿದರು.

ಶನಿವಾರ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಗರದ 20 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದ್ದು, ಒಟ್ಟು 8,117 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಕೆಪಿಎಸ್‌ಸಿ ಪರೀಕ್ಷೆ ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ್ದಾಗಿರುವುದರಿಂದ, ಈ ಹಿಂದಿನ ಪರೀಕ್ಷೆಗಳ ಅನುಭವದೊಂದಿಗೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು. ಪರೀಕ್ಷೆಗೆ ಸಂಬಂಧಿಸಿದ ಎಲ್ಲ ಸಿದ್ಧತೆಗಳನ್ನು ಮುಂಚಿತವಾಗಿಯೇ ಪೂರ್ಣಗೊಳಿಸಿ, ನಿಗದಿತ ನಮೂನೆಗಳಲ್ಲಿ ಮಾಹಿತಿಯನ್ನು ನಿಖರವಾಗಿಭರ್ತಿಮಾಡಬೇಕುಎಂದರು.

ಪರೀಕ್ಷೆ ಸಂಪೂರ್ಣ ಮುಕ್ತಾಯ ಆಗುವವರೆಗೆ ಪರೀಕ್ಷಾರ್ಥಿ ಪರೀಕ್ಷಾ ಕೇಂದ್ರ ಬಿಟ್ಟು ಹೊರ ಬರುವಂತಿಲ್ಲ. ಪರೀಕ್ಷೆಯ ಮೇಲ್ವಿಚಾರಣೆಗಾಗಿ ಹಿರಿಯ ಅಧಿಕಾ-ರಿಗಳನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಪರೀಕ್ಷೆಗೆ ನಿಯೋಜಿಸಲಾದಪ್ರತಿಯೊಬ್ಬಅಧಿಕಾರಿಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು.ಶಿಸ್ತು, ಸಮಯಪಾಲನೆ ಮತ್ತು ಹೊಣೆಗಾರಿಕೆಗೆ ಆದ್ಯತೆ ನೀಡಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಬೇಕು. ಪರೀಕ್ಷೆಯ ಗೌಪ್ಯತೆ ಮತ್ತು ಪಾರದರ್ಶಕತೆ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿ ಮಂಜುನಾಥ ಗುಳೇದಗುಡ್ಡ, ಶಾಲಾ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಆರ್. ನಾಗರಾಜ, ಡಿವೈಎಸ್ಪಿ ತುಳಜಪ್ಪ ಸುಲ್ಫಿ ತರಬೇತಿದಾರರಾದ ಲಕ್ಷ್ಮಿಕಾಂತ ಕುಂಬಾರ, ಜಗದೀಶ್ ಗುಲಗಂಜಿ, ವಿಷಯ ಪರಿ ವೀಕ್ಷರಾದ ಡಯಟಿನ ಉಪನ್ಯಾಸಕ ನಾರಾಯಣ ಬಾಬಾ, ಪರೀಕ್ಷಾ ಸಂಬಂಧಿತ ವೆಬ್ ಕಾಸ್ಟಿಂಗ್ ಅಧಿಕಾರಿ ಎಸ್.ಎಂ. ಮುಜಾವರ ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಹಾಗೂ ಅಧೀಕ್ಷಕರು ಮತ್ತು ಪರೀಕ್ಷೆಗಳಿಗೆ ನಿಯೋಜಿತ ಅಧಿಕಾರಿಗಳು ಉಪಸ್ಥಿತರಿದ್ದರು.

ತಾಲ್ಲೂಕಿನ ಸ್ಥಿರಾಸ್ತಿಗಳ ಪರಿಷ್ಕೃತ ದರಪಟ್ಟಿ ಪ್ರಕಟ
ನ.28ರವರೆಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026-27ನೇ ಸಾಲಿನ ಸ್ಥಿರಾಸ್ತಿಗಳ ಮಾರುಕಟ್ಟೆ ಮಾರ್ಗಸೂಚಿ ದರ ಪರಿಷ್ಕರಣೆ ಪ್ರಕ್ರಿಯೆಯಡಿ ಬಸವನ ಬಾಗೇವಾಡಿ, ನಿಡಗುಂದಿ ಹಾಗೂ ಕೊಲ್ಹಾರ ತಾಲ್ಲೂಕುಗಳ ಸ್ಥಿರಾಸ್ತಿಗಳ ಪರಿಷ್ಕೃತ ದರಪಟ್ಟಿಯನ್ನು ನವೆಂಬರ್ 7ರಂದು ಪ್ರಕಟಿಸಲಾಗಿದೆ.

ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ, ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳು-2013ರ ನಿಯಮ 6(1)ರ ಅನ್ವಯ ದರಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಪರಿಷ್ಕೃತ ದರಪಟ್ಟಿಯ ಕರಡು ಪ್ರತಿಯನ್ನುಬಸವನಬಾಗೇವಾಡಿನೋಂದಣಾಧಿಕಾ-ರಿಗಳ ಕಚೇರಿ, ತಹಶೀಲ್ದಾರ್ ಕಾರ್ಯಾಲಯ, ಪುರಸಭೆ ಕಾರ್ಯಾಲಯ ಹಾಗೂ ತಾಲ್ಲೂಕು ಮತ್ತು ಪಟ್ಟಣ ಪಂಚಾಯಿತಿ ಕಾರ್ಯಾಲಯಗಳಲ್ಲಿ ಸಾರ್ವಜನಿಕರ ಅವಲೋಕನಕ್ಕಾಗಿ ಪ್ರಕಟಿಸಲಾಗಿದೆ. ದರಪಟ್ಟಿಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ನವೆಂಬರ್ 9ರಿಂದ 28ರವರೆಗೆ ಲಿಖಿತ ರೂಪದಲ್ಲಿ ನೋಂದಣಾಧಿಕಾರಿಗಳು ಹಾಗೂ ಮಾರುಕಟ್ಟೆ ಮೌಲ್ಯ ನಿರ್ಧರಣಾ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಬಸವನ ಬಾಗೇವಾಡಿ ಇವರಿಗೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಸರ್ಕಾರಕ್ಕೆ ಉಲಮಾಗಳ ಎಚ್ಚರಿಕೆ | 800 ಹುದ್ದೆಗಳನ್ನು 320ಕ್ಕೆ ಸೀಮಿತಗೊಳಿಸುವುದು ಅನ್ಯಾಯ | ಉರ್ದು ಮಾಧ್ಯಮದ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟವಾಡದಿರಲು ಉಲಮಾಗಳ ಆಗ್ರಹ

ಉರ್ದು ಶಿಕ್ಷಕರ ಹುದ್ದೆ ಕಡಿತಕ್ಕೆ ಇಂಡಿ ಉಲಮಾ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಮುಸ್ಲಿಂ ಸಮುದಾಯದ ಜೊತೆಗೆ ಉಲಮಾ-ಎ-ಕಿರಾಮ್ ಅವರ ಪಾತ್ರವೂ ಮಹತ್ವದ್ದಾಗಿದೆ. ಉಲಮಾಗಳ ಒಂದು ಕರೆಯ ಮೇರೆಗೆ ಮುಸ್ಲಿಂ ಸಮುದಾಯದ ಶೇ.90ರಷ್ಟು ಜನರು ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಿ ಸರ್ಕಾರ ರಚನೆಗೆ ಸಹಕಾರ ನೀಡಿದ್ದಾರೆ. ಆದರೆ ಇಂದು ಉರ್ದು ಮಾಧ್ಯಮದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ಆಕಾಂಕ್ಷಿಗಳಿಗೆ ನ್ಯಾಯ ಒದಗಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿದರೆ, ಅದಕ್ಕೆ ತಕ್ಕ ಉತ್ತರ ನೀಡುವ ಶಕ್ತಿಯೂ ಸಮುದಾಯಕ್ಕಿದೆ ಎಂದು ಇಂಡಿಯ ಉಲಮಾ ಹಜರತ್‌ಗಳು ಎಚ್ಚರಿಕೆ ನೀಡಿದ್ದಾರೆ.

ಉರ್ದು ಮಾಧ್ಯಮ ಶಾಲೆಗಳ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಟಿಪ್ಪು ಕ್ರಾಂತಿ ಸೇನಾ ವಿದ್ಯಾರ್ಥಿ ಘಟಕದ ವತಿಯಿಂದ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾದ ಮನವಿಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದ ಉಲಮಾಗಳು, ರಾಜ್ಯ ಸರ್ಕಾರದ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪ್ರಕಟಿಸಿದ ಸಂದರ್ಭದಲ್ಲಿ ಉರ್ದು ಮಾಧ್ಯಮ ಶಾಲೆಗಳಿಗೆ ಆರಂಭದಲ್ಲಿ ಯಾವುದೇ ಹುದ್ದೆಗಳನ್ನು ಮೀಸಲಿಡದಿರುವುದು ಅನ್ಯಾಯವಾಗಿದೆ.

ಈ ಕುರಿತು ನಿರಂತರ ಹೋರಾಟ, ಪ್ರತಿಭಟನೆ ಹಾಗೂ ಮನವಿಗಳ ಫಲವಾಗಿ ಸಚಿವ ಸಂಪುಟ ಸಭೆಯಲ್ಲಿ ಉರ್ದು ಮಾಧ್ಯಮ ಶಾಲೆಗಳಿಗೆ 800 ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ಆದರೆ ಇದೀಗ ಪ್ರಕಟಿಸಿರುವ ಸಿ & ಆರ್ ನಿಯಮಗಳಲ್ಲಿ ಕೇವಲ 320 ಹುದ್ದೆಗಳನ್ನು ಮಾತ್ರ ಉಲ್ಲೇಖಿಸಿರುವುದು ಖಂಡನೀಯವಾಗಿದೆ ಎಂದು ಹೇಳಿದರು.

ಅಲ್ಲದೆ, ಕೇವಲ ಉರ್ದು ಭಾಷಾ ಶಿಕ್ಷಕರ ಹುದ್ದೆಗಳಿಗೆ ಸೀಮಿತಗೊಳಿಸದೆ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಸೇರಿದಂತೆ ಎಲ್ಲ ವಿಷಯಗಳ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಬೇಕು.

ಉರ್ದು ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಿಗೂ ಉದ್ಯೋಗ ಪಡೆಯುವ ಸಮಾನ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸಚಿವ ಸಂಪುಟದಲ್ಲಿ ಅನುಮೋದಿಸಲಾದ 800 ಉರ್ದು ಮಾಧ್ಯಮ ಶಿಕ್ಷಕರ ಹುದ್ದೆಗಳನ್ನು ಸಂಪೂರ್ಣವಾಗಿ ಜಾರಿಗೊಳಿಸಿ, ಎಲ್ಲ ವಿಷಯಗಳ ಶಿಕ್ಷಕರ ನೇಮಕಾತಿಗೆ ಅವಕಾಶ ಕಲ್ಪಿಸಬೇಕು. ಉರ್ದು ಮಾಧ್ಯಮದ ಶಿಕ್ಷಕ ಆಕಾಂಕ್ಷಿಗಳಿಗೆ ನ್ಯಾಯ ಒದಗಿಸುವ ಮೂಲಕ ಸರ್ಕಾರ ತನ್ನ ಬದ್ಧತೆಯನ್ನು ಸಾಬೀತುಪಡಿಸಬೇಕು ಎಂದು ಇಂಡಿಯ ಉಲಮಾ ಹಜರತ್‌ಗಳು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಧರ್ಮಗುರುಗಳಾದ ಮೌಲಾನಾ ಜಿಯಾವುಲ ಹಕ್ಕ ಉಮುರಿ, ಮೌಲಾನಾ ಶಾಕೀರ ಮುಲ್ಲಾ, ಹಾಫೀಜ್ ಫೀರೋಜ್ ಬಾಗವಾನ, ಮೌಲಾನಾ ಸದ್ದಾಂ ಶೇಖ್, ಸಮೀರ್ ಶೇಖ್, ಟಿಪ್ಪು ಕ್ರಾಂತಿ ಸೇನಾ ವಿದ್ಯಾರ್ಥಿ ಘಟಕದ ಉಪಾಧ್ಯಕ್ಷ ಮುಜೀಬುರಹೇಮಾನ ಅಫಜಲಪುರ, ಹಸನ ಮುಜಾವಾರ, ಅಯುಬ ನಾಟಿಕಾರ ಸೇರಿದಂತೆ ಹಲವರಿದ್ದರು.

ದೀಪಾವಳಿ ಸಂಭ್ರಮ ನಡುವೆ ಪರಿಸರ ಪ್ರಜ್ಞೆ ಮತ್ತು ಸುರಕ್ಷತೆ ಸವಾಲು

■ ಉದಯರಶ್ಮಿ ದಿನಪತ್ರಿಕೆ

ಬೆಳಕಿನ ಹಬ್ಬ ಬದುಕಿಗೆ ಕತ್ತಲೆ ತರದಿರಲಿ!

ದೀಪಾವಳಿ ಎಂದರೆ ಕೇವಲ ದೀಪಗಳ ಹಬ್ಬವಲ್ಲ; ಅದು ಕತ್ತಲೆಯ ವಿರುದ್ಧ ಬೆಳಕಿನ ವಿಜಯ, ಅಜ್ಞಾನದ ವಿರುದ್ಧ ಅರಿವಿನ ಜಾಗೃತಿ, ನಿರಾಶೆಯ ನಡುವೆ ಭರವಸೆಯ ಬೆಳಕು ಮೂಡಿಸುವ ಸಾಂಸ್ಕೃತಿಕ ಸಂಭ್ರಮ. ಮನೆಮನಗಳಲ್ಲಿ ಬೆಳಗುವ ಹಣತೆಗಳು ಬದುಕಿನ ಸಂತಸವನ್ನು ಪ್ರತಿಬಿಂಬಿಸುತ್ತವೆ. ಆದರೆ ಈ ಸಂಭ್ರಮದ ನಡುವೆ ಸಿಡಿಯುವ ಪಟಾಕಿಗಳು ಪರಿಸರ ಮಾಲಿನ್ಯ, ಆರೋಗ್ಯ ಸಮಸ್ಯೆ ಹಾಗೂ ಅಪಘಾತಗಳಿಗೆ ಕಾರಣವಾಗುತ್ತಿರುವುದು ಆತಂಕಕಾರಿ ಸಂಗತಿ. ಬೆಳಕನ್ನು ಹಂಚಬೇಕಾದ ಹಬ್ಬ ಯಾರೊಬ್ಬರ ಬದುಕಿಗೂ ಕತ್ತಲೆಯನ್ನು ತರಬಾರದು ಎಂಬ ಎಚ್ಚರಿಕೆ ನಮ್ಮೆಲ್ಲರಲ್ಲೂ ಮೂಡಬೇಕಿದೆ.



ಪರಿಸರ ಜಾಗೃತಿ ಹೆಚ್ಚುತ್ತಿರುವುದು ಆಶಾದಾಯಕ

ಇತ್ತೀಚಿನ ವರ್ಷಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಹೆಚ್ಚುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಪಟಾಕಿಗಳ ಬಳಕೆಯನ್ನು ಕಡಿಮೆ ಮಾಡುವಂತೆ ಪರಿಸರ ಪ್ರೇಮಿಗಳು, ವೈದ್ಯರು, ಸಂಘಸಂಸ್ಥೆಗಳು ಹಾಗೂ ಸರ್ಕಾರಗಳು ನಿರಂತರವಾಗಿ ಮನವಿ ಮಾಡುತ್ತಿವೆ. ವಾಯುಮಾಲಿನ್ಯ, ಶಬ್ದಮಾಲಿನ್ಯ ಮತ್ತು ಆರೋಗ್ಯದ ಮೇಲಿನ ದುಷ್ಪರಿಣಾಮಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಪ್ರಯತ್ನಗಳು ನಡೆಯುತ್ತಿವೆ. ಪಟಾಕಿ ಖರೀದಿಯ ಮೇಲೆ ಬೆಲೆ ಏರಿಕೆ, ಆರ್ಥಿಕ ಪರಿಸ್ಥಿತಿ, ಪರಿಸರ ಕಾಳಜಿ ಹಾಗೂ ಸಾಮಾಜಿಕ ಅಭಿಯಾನಗಳಂತಹ ಹಲವು ಅಂಶಗಳು ಪರಿಣಾಮ ಬೀರಬಹುದು. ಆದರೆ ಪಟಾಕಿ ಬಳಕೆ ಎಷ್ಟರಮಟ್ಟಿಗೆ ಕಡಿಮೆಯಾಗಿದೆ ಮತ್ತು ಅದಕ್ಕೆ ಯಾವ ಕಾರಣ ಹೆಚ್ಚು ಪ್ರಭಾವ ಬೀರಿದೆ ಎಂಬುದನ್ನು ನಿಖರ ಅಂಕಿಅಂಶಗಳಿಲ್ಲದೆ ನಿರ್ಧರಿಸುವುದು ಕಷ್ಟ. ಆದರೂ ಪರಿಸರ ಸ್ನೇಹಿ ಆಚರಣೆಯ ಕುರಿತು ಚರ್ಚೆಗಳು ಹೆಚ್ಚುತ್ತಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ.

ಸಂಭ್ರಮದ ನಡುವೆ ಸುರಕ್ಷತೆ ಮರೆಯದಿರಲಿ

ಪ್ರತಿವರ್ಷ ದೀಪಾವಳಿ ಸಂದರ್ಭದಲ್ಲಿ ಪಟಾಕಿ ಅವಘಡಗಳಿಂದ ಮಕ್ಕಳು ಸೇರಿದಂತೆ ಹಲವರು ಗಾಯಗೊಳ್ಳುವ ಘಟನೆಗಳು ವರದಿಯಾಗುತ್ತವೆ. ಕೆಲವರು ಕಣ್ಣಿನ ದೃಷ್ಟಿ ಕಳೆದುಕೊಳ್ಳುತ್ತಾರೆ; ಮತ್ತೆ ಕೆಲವರು ಸುಟ್ಟಗಾಯಗಳಿಂದ ನರಳುತ್ತಾರೆ. ಅಪರೂಪದ ಸಂದರ್ಭಗಳಲ್ಲಿ ಪ್ರಾಣಹಾನಿಯೂ ಸಂಭವಿಸುತ್ತದೆ.

ಹಬ್ಬದ ಸಂದರ್ಭದಲ್ಲಿ ಸರ್ಕಾರ, ಆಸ್ಪತ್ರೆಗಳು ಮತ್ತು ಮಾಧ್ಯಮಗಳು ಸುರಕ್ಷತೆಯ ಕುರಿತು ಎಷ್ಟೇ ಜಾಗೃತಿ ಮೂಡಿಸಿದರೂ ಅವಘಡಗಳು ಸಂಪೂರ್ಣವಾಗಿ ನಿಂತಿಲ್ಲ. ಕ್ಷಣಿಕ ಸಂತೋಷಕ್ಕಾಗಿ ಬದುಕಿನ ಅಮೂಲ್ಯ ಅಂಗಗಳನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುವುದು ದುರಂತವೇ ಸರಿ.

ಮಕ್ಕಳ ಕೈಯಲ್ಲಿ ಪಟಾಕಿ ಕೊಡುವ ಮೊದಲು ಪಾಲಕರು ಅದರ ಅಪಾಯಗಳನ್ನು ತಿಳಿಸಬೇಕು. ಅಪಾಯಕಾರಿ ಪಟಾಕಿಗಳಿಂದ ಮಕ್ಕಳನ್ನು ದೂರವಿಡಬೇಕು. ಪಟಾಕಿ ಬಳಕೆ ನಡೆಯುವುದಾದರೆ ಕಾನೂನುಬದ್ಧವಾಗಿ ಅನುಮತಿಸಲಾದವುಗಳನ್ನು ಮಾತ್ರ, ವಯಸ್ಕರ ಮೇಲ್ವಿಚಾರಣೆಯಲ್ಲಿ, ಸುರಕ್ಷತಾ ನಿಯಮಗಳನ್ನು ಪಾಲಿಸಿ ಬಳಸಬೇಕು. ಹಬ್ಬದ ಸಂತೋಷಕ್ಕಿಂತ ಮಕ್ಕಳ ಜೀವ ಮತ್ತು ಆರೋಗ್ಯವೇ ಅಮೂಲ್ಯ ಎಂಬ ಅರಿವು ಎಲ್ಲರಲ್ಲೂ ಇರಬೇಕು.

ಸಂಭ್ರಮಕ್ಕೂ ಸಂಯಮಕ್ಕೂ ಇರಲಿ ಸಮತೋಲನ

ಪಟಾಕಿಗಳನ್ನು ಸಂಪೂರ್ಣವಾಗಿ ನಿಷೇಧಿಸುವುದೊಂದೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂದು ಭಾವಿಸುವುದು ಸರಳೀಕೃತ ನಿಲುವಾಗಬಹುದು. ಆದರೆ ಪಟಾಕಿಗಳಿಂದಾಗುವ ಹಾನಿಯನ್ನು ನಿರ್ಲಕ್ಷಿಸುವುದೂ ಸರಿಯಲ್ಲ.

ಹಬ್ಬದ ಸಂಭ್ರಮಕ್ಕೆ ಸದ್ದು ಅನಿವಾರ್ಯವಲ್ಲ. ದೀಪಾಲಂಕಾರ, ರಂಗೋಲಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಕುಟುಂಬದ ಒಡನಾಟ, ಸಿಹಿ ಹಂಚಿಕೆ ಹಾಗೂ ಸೇವಾ ಚಟುವಟಿಕೆಗಳ ಮೂಲಕವೂ ದೀಪಾವಳಿಯನ್ನು ಅರ್ಥಪೂರ್ಣವಾಗಿ ಆಚರಿಸಬಹುದು.



ಮಕ್ಕಳ ಸಂತೋಷವನ್ನು ಕಸಿದುಕೊಳ್ಳುವುದಕ್ಕಿಂತ ಸಂತೋಷವನ್ನು ಸುರಕ್ಷಿತವಾಗಿ ಅನುಭವಿಸುವ ಮಾರ್ಗಗಳನ್ನು ಕಲಿಸಬೇಕಿದೆ. ಅತಿಯಾದ ಶಬ್ದ, ಹೊಗೆ ಮತ್ತು ಅಪಾಯ ಉಂಟುಮಾಡುವ ಪಟಾಕಿಗಳಿಂದ ದೂರವಿರುವುದು ಉತ್ತಮ. ಸಂಭ್ರಮದ ಹೆಸರಿನಲ್ಲಿ ಇತರರ ಆರೋಗ್ಯ, ನೆಮ್ಮದಿ ಮತ್ತು ಪರಿಸರಕ್ಕೆ ತೊಂದರೆಯಾಗದಂತೆ ನಡೆದುಕೊಳ್ಳುವುದು ನಿಜವಾದ ಸಾಮಾಜಿಕ ಜವಾಬ್ದಾರಿ.

ಪರಿಸರ ಕಾಳಜಿ ಹಬ್ಬಕ್ಕೆ ಮಾತ್ರ ಸೀಮಿತವೇ?

ದೀಪಾವಳಿ ಬಂದಾಗ ಪಟಾಕಿಗಳಿಂದ ಉಂಟಾಗುವ ಮಾಲಿನ್ಯದ ಕುರಿತು ದೊಡ್ಡ ಮಟ್ಟದಲ್ಲಿ ಚರ್ಚಿಸುತ್ತೇವೆ. ಆದರೆ ವರ್ಷದ ಉಳಿದ ದಿನಗಳಲ್ಲಿ ಪರಿಸರದ ಮೇಲೆ ನಡೆಯುವ ನಿರಂತರ ದಾಳಿಗಳ ಕುರಿತು ಇದೇ ಪ್ರಮಾಣದ ಕಾಳಜಿ ತೋರುತ್ತೇವೆಯೇ?



ಅಭಿವೃದ್ಧಿಯ ಹೆಸರಿನಲ್ಲಿ ಮರಗಳನ್ನು ಕಡಿಯುವಾಗ, ಅರಣ್ಯ ಪ್ರದೇಶಗಳನ್ನು ನಾಶಮಾಡುವಾಗ, ಕೆರೆಗಳನ್ನು ಮುಚ್ಚುವಾಗ, ಕೈಗಾರಿಕಾ ತ್ಯಾಜ್ಯವನ್ನು ಪರಿಸರಕ್ಕೆ ಬಿಡುವಾಗ ಹಾಗೂ ವಾಹನಗಳ ಹೊಗೆಯಿಂದ ವಾಯುಮಾಲಿನ್ಯ ಹೆಚ್ಚುತ್ತಿರುವಾಗ ನಮ್ಮ ಪರಿಸರ ಪ್ರಜ್ಞೆ ಎಲ್ಲಿರುತ್ತದೆ?

ಈ ಪ್ರಶ್ನೆಗೆ ಸಮಾಜ ಮತ್ತು ಸರ್ಕಾರ ಎರಡೂ ಉತ್ತರಿಸಬೇಕಿದೆ.

ಪರಿಸರ ಸಂರಕ್ಷಣೆ ಕೇವಲ ಹಬ್ಬದ ಸಂದರ್ಭದ ಘೋಷಣೆಯಾಗಬಾರದು. ಅದು ನಮ್ಮ ನಿತ್ಯದ ಬದುಕಿನ ಭಾಗವಾಗಬೇಕು. ಮರಗಳನ್ನು ಬೆಳೆಸುವುದು, ಅರಣ್ಯಗಳನ್ನು ಉಳಿಸುವುದು, ಸಾರ್ವಜನಿಕ ಸಾರಿಗೆಗೆ ಆದ್ಯತೆ ನೀಡುವುದು, ತ್ಯಾಜ್ಯ ನಿರ್ವಹಣೆಯನ್ನು ಸುಧಾರಿಸುವುದು ಹಾಗೂ ಮಾಲಿನ್ಯ ನಿಯಂತ್ರಣ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ನಿರಂತರವಾಗಿ ನಡೆಯಬೇಕಾದ ಕಾರ್ಯಗಳು.

ಹಸಿರು ಪರಿಸರವೇ ಭವಿಷ್ಯದ ಭರವಸೆ

ನಗರೀಕರಣದ ಭರಾಟೆಯಲ್ಲಿ ಕಾಂಕ್ರೀಟ್



ಕಟ್ಟಡಗಳು ಹೆಚ್ಚುತ್ತಿವೆ; ಮರಗಳ ಸಂಖ್ಯೆ ಕಡಿಮೆಯಾಗುತ್ತಿದೆ. ನಗರಗಳ ಉದ್ಯಾನಗಳಲ್ಲಿ ಕೇವಲ ಅಲಂಕಾರಿಕ ಹುಲ್ಲುಹಾಸು ಬೆಳೆಸುವುದಕ್ಕಿಂತ ಸ್ಥಳೀಯ ಪರಿಸರಕ್ಕೆ ಹೊಂದುವ ನೆರಳು ನೀಡುವ ಮರಗಳನ್ನು ಬೆಳೆಸಲು ಹೆಚ್ಚಿನ ಆದ್ಯತೆ ನೀಡಬೇಕು.

ಸರ್ಕಾರಿ ಜಾಗಗಳು, ಶಾಲಾ ಆವರಣಗಳು, ರಸ್ತೆಬದಿಗಳು ಹಾಗೂ ಬಳಕೆಯಾಗದ ಸೂಕ್ತ ಪ್ರದೇಶಗಳಲ್ಲಿ ಯೋಜಿತವಾಗಿ ಗಿಡಮರಗಳನ್ನು ಬೆಳೆಸಬೇಕು. ನೆಟ್ಟ ಸಸಿಗಳ ಪೋಷಣೆ ಮತ್ತು ಉಳಿವಿಗೂ ಜವಾಬ್ದಾರಿ ನಿಗದಿಪಡಿಸಬೇಕು.



ಸಿದ್ಧಲಿಂಗ ಚೌಧರಿ.
ಶಿಕ್ಷಕರು
ಸಿಂದಗಿ – ವಿಜಯಪುರ ಜಿಲ್ಲೆ

ಆದರೆ ಮರಗಳನ್ನು ಬೆಳೆಸುವುದರಿಂದ ಮಾತ್ರ ಪಟಾಕಿಗಳಿಂದ ಉಂಟಾಗುವ ತಕ್ಷಣದ ಹೊಗೆ ಮತ್ತು ಸೂಕ್ಷ್ಮ ಧೂಳಿನ ಕಣಗಳ ಸಮಸ್ಯೆ ನಿವಾರಣೆಯಾಗುವುದಿಲ್ಲ. ಹೀಗಾಗಿ ದೀರ್ಘಕಾಲೀನ ಪರಿಸರ ಸಂರಕ್ಷಣೆಯ ಜೊತೆಗೆ ಪಟಾಕಿ ಬಳಕೆಯನ್ನು ಕಡಿಮೆ ಮಾಡುವ ಕ್ರಮಗಳೂ ಅಗತ್ಯ.

ಬೆಳಗಬೇಕಿರುವುದು ಹಣತೆ ಮಾತ್ರವಲ್ಲ, ನಮ್ಮ ವಿವೇಕವೂ! ಹಬ್ಬಗಳು ಮನುಷ್ಯನ ಬದುಕಿಗೆ ಸಂತೋಷ, ಸಾಮರಸ್ಯ ಮತ್ತು ಹೊಸ ಚೈತನ್ಯ ನೀಡಬೇಕು. ಮತ್ತೊಬ್ಬರ ನೋವಿಗೆ ಕಾರಣವಾಗುವ ಆಚರಣೆ ನಿಜವಾದ ಸಂಭ್ರಮವಾಗಲಾರದು.

ದೀಪಾವಳಿಯ ಬೆಳಕು ಕೇವಲ ಮನೆಯ ಅಂಗಳವನ್ನು ಬೆಳಗಿದರೆ ಸಾಲದು; ನಮ್ಮ ಮನಸ್ಸಿನಲ್ಲಿರುವ ಅಜ್ಞಾನ, ಅಹಂಕಾರ ಮತ್ತು ನಿರ್ಲಕ್ಷ್ಯದ ಕತ್ತಲೆಯನ್ನೂ ದೂರಮಾಡಬೇಕು.

ಪರಿಸರವನ್ನು ಪ್ರೀತಿಸುವುದು ಎಂದರೆ ಸಂಪ್ರದಾಯವನ್ನು ದ್ವೇಷಿಸುವುದಲ್ಲ. ಸಂಪ್ರದಾಯವನ್ನು ಗೌರವಿಸುವುದು ಎಂದರೆ ಅದರ ಹೆಸರಿನಲ್ಲಿ ನಡೆಯುವ ಅಪಾಯಗಳನ್ನು ಸಮರ್ಥಿಸುವುದೂ ಅಲ್ಲ. ಕಾಲಕ್ಕೆ ತಕ್ಕಂತೆ ಆಚರಣೆಯಲ್ಲಿ ವಿವೇಕಯುತ ಬದಲಾವಣೆ ತರುವುದು ಪ್ರಬುದ್ಧ ಸಮಾಜದ ಲಕ್ಷಣ. ಪಟಾಕಿಯ ಸದ್ದು ಕ್ಷಣಿಕ; ಅದರ ಅವಘಡದ ನೋವು ಜೀವನಪರ್ಯಂತ ಉಳಿಯಬಹುದು. ಹಣತೆಯ ಬೆಳಕು ಚಿಕ್ಕದಾದರೂ ಅದು ನೀಡುವ ಸಂದೇಶ ದೊಡ್ಡದು.

ಈ ದೀಪಾವಳಿಯಲ್ಲಿ ನಮ್ಮ ಮನೆಗಳ ಜೊತೆಗೆ ಮನಸ್ಸುಗಳನ್ನೂ ಬೆಳಗಿಸೋಣ. ಮಕ್ಕಳ ಮುಖದಲ್ಲಿ ನಗು ಅರಳಿಸೋಣ. ಪರಿಸರದ ಮೇಲಿನ ಕಾಳಜಿಯನ್ನು ಕೇವಲ ಮಾತಿಗಷ್ಟೇ ಸೀಮಿತಗೊಳಿಸದೆ ನಡವಳಿಕೆಯಲ್ಲಿ ಅಳವಡಿಸಿಕೊಳ್ಳೋಣ.

ಏಕೆಂದರೆ ದೀಪಾವಳಿ ಕತ್ತಲೆಯನ್ನು ಓಡಿಸುವ ಹಬ್ಬವೇ ಹೊರತು, ಯಾರೊಬ್ಬರ ಬದುಕಿಗೂ ಕತ್ತಲೆ ತರುವ ಹಬ್ಬವಾಗಬಾರದು!

ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಕರಡು ಪ್ರಕಟಣೆ: ಆಕ್ಷೇಪಣೆ ಸಲ್ಲಿಸಲು ನ.28 ಕೊನೆ ದಿನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಜಯಪುರ ಹಿರಿಯ ಉಪನೋಂದಣಿ ಕಚೇರಿ ವ್ಯಾಪ್ತಿಯ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಸ್ಥಿರಾಸ್ತಿಗಳ 2026–27ನೇ ಸಾಲಿನ ಪರಿಷ್ಕೃತ ಮಾರ್ಗಸೂಚಿ ಬೆಲೆಗಳ ಕರಡು ಪ್ರತಿಯನ್ನು ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.


ವಿಜಯಪುರ ತಹಶೀಲ್ದಾರರು ಹಾಗೂ ಮಾರುಕಟ್ಟೆ ಮೌಲ್ಯ ನಿರ್ಧರಣಾ ಉಪಸಮಿತಿ ಅಧ್ಯಕ್ಷರ ನೇತೃತ್ವದಲ್ಲಿ ನವೆಂಬರ್ 6ರಂದು ನಡೆದ ಉಪಸಮಿತಿ ಸಭೆಯ ನಿರ್ದೇಶನ ಹಾಗೂ ಮಾರ್ಗದರ್ಶನದಂತೆ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಗಳನ್ನು ಪರಿಷ್ಕರಿಸಲಾಗಿದೆ. ಪರಿಷ್ಕೃತ ಮಾರ್ಗಸೂಚಿ ಬೆಲೆಗಳ ಕರಡು ಪ್ರತಿಯನ್ನು ಸಾರ್ವಜನಿಕರ ಮಾಹಿತಿಗಾಗಿ ವಿಜಯಪುರದ ಹಿರಿಯ ಉಪನೋಂದಣಿ ಕಚೇರಿಯಲ್ಲಿ ಪ್ರಕಟಿಸಲಾಗಿದೆ. ಈ ಬೆಲೆಗಳ ಕುರಿತು ಸಾರ್ವಜನಿಕರು ತಮ್ಮ ಆಕ್ಷೇಪಣೆ ಅಥವಾ ಸಲಹೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಆಸಕ್ತರು ನವೆಂಬರ್ 9ರಿಂದ 28ರವರೆಗೆ ತಮ್ಮ ಲಿಖಿತ ಆಕ್ಷೇಪಣೆಗಳನ್ನು ಹಿರಿಯ ಉಪನೋಂದಣಿ ಅಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ ಎಂದು ಹಿರಿಯ ಉಪನೋಂದಣಿ ಅಧಿಕಾರಿಗಳು ಹಾಗೂ ಮಾರುಕಟ್ಟೆ ಮೌಲ್ಯ ನಿರ್ಧರಣಾ ಉಪಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಭೀಮಾಶಂಕರ ಬಿರಾದಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Regn No. 2483 Date : 28-07-1919

ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ

(RBI Licence No. RPCD (BG) DCCB.20/2011-12, dt:15-12-2011)
ಕಿತ್ತೂರ ಚೆನ್ನಮ್ಮ ನಗರ, ಸೋಲಾಪೂರ ರಸ್ತೆ, ವಿಜಯಪುರ-586103.
ದೂರವಾಣಿ ಸಂಖ್ಯೆ: 08352-265417, 265418, ಫ್ಯಾಕ್ಸ್ ನಂ.08352-265473
E-mail: bdccbank_bjp@yahoo.com



ಶ್ರೀ ಶಿವಾನಂದ ಎಸ್. ಪಾಟೀಲ ಶಾಸಕರು
ಅಧ್ಯಕ್ಷರು
(ಸಹಕಾರ ರತ್ನ ಪುರಸ್ಕೃತ 2014)



ಶ್ರೀ ರಾಜಶೇಖರ ಬಿ. ಗುಡದಿನ್ನಿ
ಉಪಾಧ್ಯಕ್ಷರು



ಶ್ರೀ ಎಸ್.ಎ. ಢವಳಗಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸನ್ 1999-2000ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಹಾಗೂ ಸನ್ 2008-09 ರಿಂದ
2014-15, 2019-20, 2022-23 ಹಾಗೂ 2024-25ನೇ ಸಾಲಿನ ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ ಬ್ಯಾಂಕ

ಪಕ್ಷಿನೋಟ
(31-03-2026ಕ್ಕೆ) (ರೂ.ಕೋಟಿಗಳಲ್ಲಿ)

ಅ.ನಂ.	ವಿವರ	ಮೊತ್ತ
1.	ಶಾಖೆಗಳು	51
2.	ಶೇರು ಬಂಡವಾಳ	200.30
3.	ನಿಧಿಗಳು	451.90
4.	ಠೇವಣಿಗಳು	4402.36
5.	ಪಡೆದ ಸಾಲಗಳು	492.29
6.	ದುಡಿಯುವ ಬಂಡವಾಳ	5599.89
7.	ಬರತಕ್ಕ ಸಾಲಗಳ ಬಾಕಿ	3673.20
8.	ಹೂಡಿಕೆಗಳು	1538.00
9.	ನಿವ್ವಳ ಲಾಭ	29.16
10.	ನಿವ್ವಳ ಅನುತ್ಪಾದಕ ಆಸ್ತಿ	0.00%
11.	ಆಡಿಟ್ ಕ್ಲಾಸ್	ಅ

ಬ್ಯಾಂಕಿನ ಠೇವಣಿಗಳ ಮೇಲಿನ ಪರಿಷ್ಕೃತ ಬಡ್ಡಿ ದರಗಳು
ದಿನಾಂಕ : 03-08-2026 ರಿಂದ ಜಾರಿಗೆ (ಪ್ರತಿ ಶತ)


ಅ.ನಂ.	ಠೇವಣಿ ಅವಧಿ ವಿವರ	ಪರಿಷ್ಕೃತ ಬಡ್ಡಿ ದರ
1.	ಉಳಿತಾಯ ಖಾತೆ	3.25
	ಅವಧಿ ಠೇವಣಿಗಳು	
2.	15 ರಿಂದ 45 ದಿನಗಳವರೆಗೆ	4.25
3.	46 ರಿಂದ 90 ದಿನಗಳವರೆಗೆ	5.25
4.	91 ರಿಂದ 180 ದಿನಗಳವರೆಗೆ	6.00
5.	181 ರಿಂದ 364 ದಿನಗಳವರೆಗೆ	6.50
6.	1 ವರ್ಷ ಮತ್ತು ಮೇಲ್ಪಟ್ಟು	7.50

* ಹಿರಿಯ ನಾಗರಿಕರ ಎಲ್ಲ ಅವಧಿ ಠೇವಣಿಗಳ ಮೇಲೆ ಪ್ರಚಲಿತ ಬಡ್ಡಿ ದರಕ್ಕಿಂತಲೂ ಶೇ. 0.50ರಷ್ಟು ಹೆಚ್ಚಿನ ಬಡ್ಡಿ


- ಬ್ಯಾಂಕಿನ 51 ಶಾಖೆಗಳು ಗಣಕೀಕರಣ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿದ್ದು, RTGS/NEFT/IMPS/Phone pay/Google Pay ಮತ್ತು Mobile Banking ಸೌಲಭ್ಯ ಇರುತ್ತದೆ. ಬ್ಯಾಂಕಿನ IFSC Code: KSCB0014001
- ಬ್ಯಾಂಕಿನ 40 ಶಾಖೆಗಳು ಲಾಕರ ಸೌಲಭ್ಯವನ್ನು ಹೊಂದಿವೆ.
- ಬ್ಯಾಂಕಿನ ಕೃಷಿಯೇತರ ಸಾಲಗಳ ಮೇಲಿನ ಪರಿಷ್ಕೃತ ಬಡ್ಡಿದರವು ಶೇ. 10.00 ರಿಂದ 13.00 ಇರುತ್ತದೆ.
- ಬ್ಯಾಂಕು ಠೇವಣಿ ಆಧಾರಿತ, ಮನೆ ಕಟ್ಟಲು, ಫಾರ್ಮ ಹೌಸ್, ಸಂಜೀವಿನಿ (ವೃತ್ತಿಪರರಿಗೆ), ವಾಹನಗಳ ಖರೀದಿ, [illegible] ಹಾಗೂ ಬಂಗಾರ ಆಭರಣಗಳ ಆಧಾರದ ಸಾಲ [illegible]
- ಸ್ವ-ಸಹಾಯ ಸಂಘಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.
- [illegible] ರೂ. 5 ಲಕ್ಷದವರೆಗೆ [illegible] ರೂ. 5 ಲಕ್ಷ ಮೇಲ್ಪಟ್ಟು 10 ಲಕ್ಷಕ್ಕೆ ಶೇ.10ರ ಬಡ್ಡಿದರದಲ್ಲಿ ಕೃಷಿ [illegible] ಶೇ. 3ರ ಬಡ್ಡಿ ದರದಲ್ಲಿ 15 ಲಕ್ಷದವರೆಗೆ ಸಾಲ ಸೌಲಭ್ಯ.
- ಹಿರಿಯ ನಾಗರಿಕರ ಎಲ್ಲ ಅವಧಿ ಠೇವಣಿಗಳ ಮೇಲೆ ಪ್ರಚಲಿತ ಬಡ್ಡಿ ದರಕ್ಕಿಂತಲೂ ಶೇ. 0.50ರಷ್ಟು ಹೆಚ್ಚಿನ ಬಡ್ಡಿ.
- ರೈತರಿಗೆ ರೂ. 5.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದಲ್ಲಿ ಕೃಷಿ ಅಲ್ಪಾವಧಿ ಸಾಲದ ಸೌಲಭ್ಯ.
- [illegible]
- [illegible]

ಹೆಚ್ಚಿನ ವಿವರಗಳಿಗಾಗಿ ನಮ್ಮ ಬ್ಯಾಂಕಿನ ಶಾಖೆಗಳಿಗೆ ಸಂಪರ್ಕಿಸಿ






ಡಾ. ಫ.ಗು. ಹಳಕಟ್ಟಿ



ಶ್ರೀ ಬಂಥನಾಳ ಸ್ವಾಮೀಜಿ



ಶ್ರೀ ಬಿ.ಎಂ. ಪಾಟೀಲ

ಉತ್ತರ ಕರ್ನಾಟಕದಲ್ಲಿ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಆದರ್ಶಪ್ರಾಯ ಸೇವೆಯನ್ನು ಒದಗಿಸುತ್ತಿರುವ ಕಾರಣಕ್ಕಾಗಿ ಮನೆಮಾತಾಗಿರುವಂತಹ ಕೆಲವೇ ಕೆಲವು ಶೈಕ್ಷಣಿಕ ಸಂಸ್ಥೆಗಳಿವೆ. ಬಿಎಲ್‌ಡಿಇ ಸಂಸ್ಥೆ ಅಥವಾ ಭಾರತೀಯ ಲಿಂಗಾಯತ ಡೆವಲಪ್‌ಮೆಂಟ್ ಎಜುಕೇಶನಲ್ ಅಸೋಸಿಯೇಷನ್ ಅಂತಹ ಒಂದು ಸಂಸ್ಥೆಯಾಗಿದೆ.

ವಚನಪಿತಾಮಹ ಡಾ. ಫ.ಗು. ಹಳಕಟ್ಟಿಯವರು 1910ರಲ್ಲಿ ಸ್ಥಾಪಿಸಿದಂತಹ ಬಿಎಲ್‌ಡಿಇ ಸಂಸ್ಥೆಯು, ಜರ್ಮನಿ ಮೂಲದ ಬಾಷೆಲ್ ಮಿಷನ್ ಕಂಪನಿ ನಡೆಸುತ್ತಿದ್ದಂತಹ 'ನ್ಯೂ ಇಂಗ್ಲಿಷ್ ಸ್ಕೂಲ್' ಅನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ತನ್ನ ಶೈಕ್ಷಣಿಕ ಸೇವಾ ಕಾರ್ಯವನ್ನು ಆರಂಭಿಸಿತು. ಅದೊಂದು ಸಣ್ಣ ಆರಂಭವಾದರೂ ಸಮರ್ಥ ಅಡಿಪಾಯವಾಗಿತ್ತು. ದಶಕಗಳು ಕಳೆದಂತೆ ಬಿಎಲ್‌ಡಿಇ ಸಂಸ್ಥೆ ಡಾ. ಫ.ಗು. ಹಳಕಟ್ಟಿ, ಬಂಥನಾಳದ ಶ್ರೀ ಸಂಗನಬಸವೇಶ್ವರ ಮಹಾಯೋಗಿಗಳು, ಶ್ರೀ ಬಿ.ಎಂ. ಪಾಟೀಲ ಹಾಗೂ ಶ್ರೀ ಎಂ.ಬಿ. ಪಾಟೀಲ ಅವರಂತಹ ದಾರ್ಶನಿಕರ ನಾಯಕತ್ವದಲ್ಲಿ ಸ್ಥಿರ ಪ್ರಗತಿಯನ್ನು ಸಾಧಿಸಿತು. ಈ ಎಲ್ಲ ಮಹನೀಯರೂ ಸಹ ಬಿಎಲ್‌ಡಿಇ ಸಂಸ್ಥೆಯನ್ನು, ನಿರ್ದಿಷ್ಟವಾಗಿ, ಬಹುತೇಕ ಉತ್ತರ ಕರ್ನಾಟಕ ಭಾಗದಲ್ಲಿ ಅನುಕೂಲವಂಚಿತ ವರ್ಗಗಳು ಹಾಗೂ ಗ್ರಾಮೀಣ ಜನರ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವಂತಹ ಬೃಹತ್ ಸಮಾಜ-ಕೇಂದ್ರಿತ ಸಂಸ್ಥೆಯಾಗಿ ಅಭಿವೃದ್ಧಿಪಡಿಸಲು ಅವಿರತವಾಗಿ ಶ್ರಮಿಸಿದ್ದಾರೆ. ಬಿಎಲ್‌ಡಿಇ ಸಂಸ್ಥೆಯು ಸಮಾಜದಲ್ಲಿ ಮಹತ್ತರವಾದ ಬದಲಾವಣೆಗೆ ಕಾರಣವಾಗಿರುವಂತಹ ಹಲವಾರು ಪ್ರಮುಖ ಸಾಹಿತ್ಯಿಕ, ಪರಿಸರ ಹಾಗೂ ಅಭಿವೃದ್ಧಿ ಕೆಲಸಗಳನ್ನೂ ಬೆಂಬಲಿಸುತ್ತಾ ಬಂದಿದೆ.

ಇಂದು ಸಂಸ್ಥೆಯು, ವೈದ್ಯಕೀಯ, ವಿಜ್ಞಾನ, ವಾಣಿಜ್ಯ, ಕಲೆ, ಎಂಜಿನಿಯರಿಂಗ್, ಪಾಲಿಟೆಕ್ನಿಕ್, ನರ್ಸಿಂಗ್, ಫಾರ್ಮಸಿ, ಆಯುರ್ವೇದ, ಕೃಷಿ, ಪ್ರೀ–ಸ್ಕೂಲ್‌ಗಳು, ಪಬ್ಲಿಕ್ ಶಾಲೆಗಳು, ಇತ್ಯಾದಿಗಳನ್ನು ಒಳಗೊಂಡಿರುವ 90ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ.

ಈ ಸಂಸ್ಥೆ, ಹಲವಾರು ವಿಶೇಷ ಹಾಗೂ ಸೂಪರ್ ಸ್ಪೆಷಾಲಿಟಿಗಳನ್ನು ಒಳಗೊಂಡಂತೆ ವಿವಿಧ ವೈದ್ಯಕೀಯ ವಿಜ್ಞಾನದ ಕೋರ್ಸ್‌ಗಳನ್ನು ಒದಗಿಸುತ್ತಿರುವಂತಹ **ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾನಿಲಯವನ್ನೂ ಸ್ಥಾಪಿಸಿದೆ.** ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಕಾಲೇಜು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಈ ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಯಾಗಿದೆ. ಇದೊಂದು 1,400–ಹಾಸಿಗೆಗಳ ದೊಡ್ಡ ಬೋಧನಾ ಆಸ್ಪತ್ರೆಯಾಗಿದೆ.

ಈ ಸಂಸ್ಥೆಯು ಡಾ. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ಸಾಹಿತ್ಯ ಹಾಗೂ ಸಂಶೋಧನಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ಈ ಕೇಂದ್ರವು ಸಂಶೋಧನೆ–ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿಯೇ ಗುರುತಿಸಿಕೊಂಡು ಹಲವು ಪ್ರಶಸ್ತಿಗಳಿಗೂ ಭಾಜನವಾಗಿದೆ.

ಬಿಎಲ್‌ಡಿಇ ಸಂಸ್ಥೆ ಉತ್ತರ ಕರ್ನಾಟಕದಲ್ಲಿ ತನ್ನ ಶೈಕ್ಷಣಿಕ ಹಾಗೂ ಪೂರಕ ಚಟುವಟಿಕೆಗಳ ಮೂಲಕ ರಾಷ್ಟ್ರಕ್ಕೆ ಅತ್ಯುತ್ತಮ ಸೇವೆಯನ್ನು ಒದಗಿಸುವ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುವ ಕಾರ್ಯವನ್ನು ಮಾಡುತ್ತಿದೆ. ಇಷ್ಟೇ ಅಲ್ಲದೇ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹೃದಯ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಹಾಗೂ ಉತ್ತರ ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ಹೃದಯದ ಕೀಹೋಲ್ ಶಸ್ತ್ರಚಿಕಿತ್ಸೆ ಕೂಡ ಆರಂಭಿಸಲಾಗಿದೆ.

ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಶೈಕ್ಷಣಿಕ ಚಟುವಟಿಕೆಯೊಂದಿಗೆ ಉದ್ಯಮ ಹಾಗೂ ಸ್ಟಾರ್ಟ್‌ಅಪ್ ತರಬೇತಿಗಳನ್ನು ನೀಡಲು ಶ್ರೀ ಬಿ.ಎಂ.ಪಾಟೀಲ ಫೌಂಡೇಶನ್ ಫಾರ್ ಇನ್ನೊವೇಶನ್ ಹಾಗೂ ಇನ್‌ಕ್ಯೂಬೇಶನ್ ಪ್ರಾರಂಭಿಸಿದೆ.

ಇಂದಿನ ಸ್ಪರ್ಧಾತ್ಮಕ ಕಾಲದಲ್ಲಿ ವಿದ್ಯಾರ್ಥಿಗಳಿಗೆ ನೆರವಾಗಲು ನೀಟ್ ಹಾಗೂ ಜೆಇಇ ತರಬೇತಿಗೆ ರಾಜಸ್ಥಾನದ ಎಲ್ಲೆನ್ ಕರಿಯರ್ ಜೊತೆ ಒಡಂಬಡಿಕೆ ಮಾಡಿಕೊಂಡಿದೆ.



ಭಾರತೀಯ ಲಿಂಗಾಯತ ಡೆವಲಪ್‌ಮೆಂಟ್ ಎಜುಕೇಶನಲ್ ಅಸೋಸಿಯೇಷನ್ (BLDEA)
ಬಂಗಾರಮ್ಮ ಸಜ್ಜನ ಆವರಣ, ಬಿ.ಎಂ. ಪಾಟೀಲ ರಸ್ತೆ,
ವಿಜಯಪುರ, ಕರ್ನಾಟಕ–586103
www.bldea.org

ಎಲ್ಲೆಡೆ ಪಟಾಕಿಗಳ ಅಬ್ಬರ; ತಯಾರಕರ ಬಾಳು ದುಸ್ತರ

■ ಉದಯರಶ್ಮಿ ದಿನಪತ್ರಿಕೆ

ದೀಪಾವಳಿ ಹಬ್ಬ ಬಂತು ಅಂದ್ರೆ ಎಲ್ಲೆಡೆ ಸಡಗರ ಸಂಭ್ರಮ. ದೀಪಾಲಂಕಾರದ ಜೊತೆಗೆ ಸಂಭ್ರಮಿಸಲು ಪಟಾಕಿಗಳ ಅಬ್ಬರ ಹಬ್ಬದ ವಿಶೇಷ. ದೀಪವೇನೋ ಶಾಂತವಾಗಿ ಉರಿಯುತ್ತೆ ಆದರೆ ಪಟಾಕಿ ಹಾಗಲ್ಲ.. ಎಲ್ಲೆಡೆ ಗದ್ದಲ, ಹೊಗೆ, ಬೆಳಕಿನ ಅಬ್ಬರದೊಂದಿಗೆ ಖುಷಿಯನ್ನು ಕೊಡುತ್ತೆ.

ಪಟಾಕಿ ಹಚ್ಚುವುದರಿಂದ ಮುಖ್ಯವಾಗಿ ಶಬ್ದ ಮಾಲಿನ್ಯ, ವಾಯು ಮಾಲಿನ್ಯ ಜೊತೆಗೆ ಅದರ ಹೊಗೆ ಆರೋಗ್ಯವನ್ನು ಹಾಳು ಮಾಡುತ್ತದೆ. ಇದು ತಿಳಿದಿದ್ದರೂ ಆ ಸಂಭ್ರಮದ ಕ್ಷಣವನ್ನು ಯಾರೂ ಬಿಡಲು ತಯಾರಿಲ್ಲ. ಅದರಲ್ಲೂ ಮಕ್ಕಳಿಗಂತೂ ಪಟಾಕಿ ಹಚ್ಚಿ ಕುಣಿದಾಡುವುದು ಅಂದ್ರೆ ಅಚ್ಚು ಮೆಚ್ಚು.



ಪೋಷಕರು ಮಕ್ಕಳನ್ನ ದೂರ ಇರಿಸಿ ಜಾಗರೂಕತೆಯಿಂದ ಪಟಾಕಿಂ-ಯನ್ನು ಹಚ್ಚುತ್ತಾರೆ. ಒಂದು ದಿನ ಪಟಾಕಿ ಹಚ್ಚುವ ನಾವು ಎಷ್ಟೊಂದು ಕಾಳಜಿಯಿಂದ ಆರೋಗ್ಯದ ಕಡೆ ಗಮನಹರಿಸಿ ಪಟಾಕಿಗೆ ಬೆಂಕಿ ಹಚ್ಚುತ್ತೇವೆ. ಕಾರಣ ಅದರ ರಾಸಾಯನಿಕಯುಕ್ತ ಹೊಗೆ ದೇಹದೊಳಗೆ ಸೇರಿದಿರಲಿ ಎಂದು.

ಆದರೆ.. ದಿನನಿತ್ಯ ಪಟಾಕಿ ತಯಾರಿಕೆಯಲ್ಲಿ ತೊಡಗಿಕೊಂಡ ಕಾರ್ಮಿಕರ ಸ್ಥಿತಿ ಏನಾಗಬಹುದು, ಅವರ ಆರೋಗ್ಯ ಹೇಗಿರಬಹುದು ಅಲ್ವಾ..



ಹೌದು.. ಪಟಾಕಿಗಳು ಬಹಳಷ್ಟು ಭಾರವಾದ ಲೋಹಗಳು ಮತ್ತು ಕ್ಯಾಡ್ಮಿಯಮ್, ಸೀಸ, ಕ್ರೋಮಿಯಂ, ಅಲ್ಯೂಮಿನಿಯಂ, ಇತ್ಯಾದಿ ವಿಷಕಾರಿ ರಾಸಾಯನಿಕಗಳನ್ನು ಒಳಗೊಂಡಿರುತ್ತವೆ. ಇವುಗಳು ಉಸಿರಾಟದೊಂದಿಗೆ ದೇಹದಲ್ಲಿ ಸಂಗ್ರಹಗೊಂಡರೆ ಕ್ರಮೇಣ ಆರೋಗ್ಯವನ್ನು ಹಾನಿಗೊಳಿಸಬಹುದು.

ವಿಶೇಷವಾಗಿ ಹೃದಯದ ಕಾಯಿಲೆಗಳು, ಉಸಿರಾಟ ಅಥವಾ ನರಮಂಡಲದ ಅಸ್ವಸ್ಥತೆ, ಸಾಮಾನ್ಯ ನೆಗಡಿ ಮತ್ತು ಕೆಮ್ಮಿನಿಂದ ಬಳಲುವುದು, ಗಂಟಲು ಕೆರೆತ, ಕಫ, ಇದಿಷ್ಟೇ ಅಲ್ಲದೆ ಅಸ್ತಮಾದಂತಹ ಗಂಭೀರ ಸಮಸ್ಯೆಯನ್ನೂ ಉಂಟುಮಾಡಬಹುದು.

ಪಟಾಕಿ ತಯಾರಿಕೆ ಹೆಚ್ಚಾಗಿ ಸಣ್ಣ ಕೈಗಾರಿಕೆಗಳಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಗೊಂಡಿರುವುದರಿಂದ, ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಜನರು ಬಹುತೇಕ ಅನಕ್ಷರಸ್ಥರಾಗಿರುತ್ತಾರೆ. ಹಾಗೂ ಬಡತನದ ಜೀವನ ಸಾಗಿಸುತ್ತಿರುತ್ತಾರೆ. ಆರೋಗ್ಯದ ಬಗ್ಗೆ ಕೂಡ ಹೆಚ್ಚಿನ ಕಾಳಜಿ ವಹಿಸುವುದಿಲ್ಲ. ಅಲ್ಲದೆ ಪ್ರತಿಯೊಂದು ಕೆಲಸವನ್ನು ಕೈಯಿಂದಲೇ ಮಾಡುವುದರಿಂದ ಹೆಚ್ಚಿನ ಕೆಲಸಗಾರರಿಗೆ ರಾಸಾಯನಿಕಗಳನ್ನು ನಿರ್ವಹಿಸುವ ಬಗ್ಗೆ ಅದರ ಅಪಾಯದ ತೀವ್ರತೆ ತಿಳಿದಿರುವುದಿಲ್ಲ. ಒಂದು ವೇಳೆ ಅರಿವಿದ್ದರೂ ಕೂಡ ಕೆಲಸದ ಅನಿವಾರ್ಯತೆ ಎಲ್ಲವನ್ನು ಮರೆಸುತ್ತದೆ. ಈ ಬಗೆಯ ಉದ್ಯಮಗಳು ಅತ್ಯಂತ ಅಪಾಯಕಾರಿ ಅಲ್ಲಿನ ಕೂಲಿ ಕಾರ್ಮಿಕರು, ಚಿಕ್ಕ ಪಟಾಕಿಯಿಂದ ಹಿಡಿದು ದೊಡ್ಡ ದೊಡ್ಡ ಪಟಾಕಿಗಳವರೆಗೂ ರಾಸಾಯನಿಕಗಳನ್ನು ಮಿಶ್ರ ಮಾಡಿ, ವಿಭಿನ್ನ ವಿನ್ಯಾಸದ ಕೊಳವೆಗಳಲ್ಲಿ ತುಂಬಿಸಿ, ಪ್ಯಾಕಿಂ-ಗ್ ಮಾಡುವವರೆಗೂ ಬೆಳಗ್ಗಿನಿಂದ ಸಂಜೆಯ ತನಕ ವಿಷಯುಕ್ತ ರಾಸಾಯನಿಕಗಳ ಮಧ್ಯೆಯೇ ಜೀವನ ಸಾಗುತ್ತಿರುತ್ತದೆ. ಕೆಲವರು ಮಾಸ್ಕ್, ಕೈಚೀಲಗಳನ್ನು ಧರಿಸಿದರೆ, ಇನ್ನು ಕೆಲವರು ಹಾಗೆಯೇ ಕೆಲಸದಲ್ಲಿ ಮುಂದುವರಿಯುತ್ತಾರೆ. ಇದು ಅತ್ಯಂತ ಅಪಾಯಕಾರಿ. ಅವರಿಗೇ ಅರಿವಿಲ್ಲದೆ, ವಿಷಯುಕ್ತ ರಾಸಾಯನಿಕಗಳು ಉಸಿರಾಟದ ಮೂಲಕ ದೇಹವನ್ನು ಸೇರುತ್ತವೆ. ನಂತರ ಒಮ್ಮೆ ದೇಹದ ಸ್ಥಿತಿ ಹದಗೆಟ್ಟಾಗ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ.

ಆದಷ್ಟು ಚಿಕ್ಕ ಮಕ್ಕಳು ಗರ್ಭಿಣಿಯರು ವಯೋವೃದ್ಧರು ಇಂತಹ ಕೆಲಸಗಳಿಂದ ದೂರವಿರುವುದು ಸೂಕ್ತ. ಆದ-'ರೆ ಹೊಟ್ಟೆಪಾಡಿಗಾಗಿ ಎಂತಹ ಕೆಲಸಕ್ಕೂ ತಯಾರಿರುವ ಕೆಲವರು ಇದರಿಂದ ತೊಂದರೆಗಳನ್ನು ಅನುಭವಿಸುತ್ತಾರೆ.

ಇದಿಷ್ಟೇ ಅಲ್ಲದೆ ಪಟಾಕಿ ಉದ್ಯಮದಲ್ಲಿ ಅಸುರಕ್ಷಿತ ಕೆಲಸಕ್ಕೆ ಪರವಾನಗಿ ಪಡೆಯದ ಕೆಲವು ಘಟಕಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ, ಇದು ಪಟಾಕಿ ಉದ್ಯಮಗಳಲ್ಲಿ ಆಗಾಗ್ಗೆ ಅಪಘಾತಗಳಿಗೆ ಕಾರಣವಾಗುತ್ತದೆ. ಪಟಾಕಿ ಮಾರಾಟ ಮತ್ತು ಬಳಕೆಯ ಸಮಯದಲ್ಲಿ ಸರಿಯಾದ ಕ್ರಮದಲ್ಲಿ ತಯಾರಿಕೆಯಲ್ಲಿ ತೊಡಗದಿದ್ದರೆ ಬೆಂಕಿ ಅವಘಡಗಳು ಸಂಭವಿಸಲು ಕಾರಣವಾಗುತ್ತದೆ. ಇಂತಹ ದುರ್ಘಟನೆಗಳು ನಡೆದಾಗ ಹಲವಾರು ಮಂದಿ ಜೀವ ತ್ಯಾಗ ಮಾಡಿರುವ ಉದಾಹರಣೆಗಳು ಕೂಡ ಇವೆ. ಇದರ ಕುರಿತಾಗಿ ಸರ್ಕಾರ ಗಂಭೀರವಾದ ಕ್ರಮ ಕೈಗೊಳ್ಳಬೇಕು. ಪಟಾಕಿ ತಯಾರಿಕೆಯ ಬಗ್ಗೆ ಅರ್ಥಮಾಡಿಕೊಳ್ಳುವಂತೆ ಕೆಲಸಗಾರರಿಗೆ ತರಬೇತಿ ನೀಡಬೇಕು. ರಾಸಾಯನಿಕಗಳನ್ನು ಬಳಸುವಾಗ ಲೋಹದ ಉಪಕರಣಗಳನ್ನು ತಪ್ಪಿಸಬೇಕು. ಚಿಕ್ಕ ಪುಟ್ಟ ಮಳಿಗೆಗಳಲ್ಲಿ, ಇಕ್ಕಟ್ಟಾದ ಜಾಗಗಳಲ್ಲಿ, ಸರಿಯಾಗಿ ಗಾಳಿಯಾಡದ ಪ್ರದೇಶಗಳಲ್ಲಿ ಪಟಾಕಿ ತಯಾರಿಸುವುದನ್ನು ನಿಲ್ಲಿಸಬೇಕು.



ಕೆಲಸದ ಸ್ಥಳದಲ್ಲಿ ಸಂಭವಿಸುವ ಅಪಾಯವನ್ನು ತಪ್ಪಿಸಲು ಸೂಕ್ತವಾದ ಕ್ರಮಗಳನ್ನು ಒದಗಿಸಬೇಕು

ಪ್ರತಿ ಪಟಾಕಿ ಉದ್ಯಮವು ಕಾರ್ಖಾನೆಗಳ ಕಾಯಿದೆಯಲ್ಲಿ ಉಲ್ಲೇಖಿಸಿರುವಂತೆ ಆರೋಗ್ಯ ಸುರಕ್ಷತಾ ಕಾರ್ಯವಿಧಾನವನ್ನು ಅನುಸರಿಸಬೇಕು. ಮತ್ತು ಕೈಗಾ-ರಿಕೆಗಳ ಸುರಕ್ಷತಾ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಮೌಲ್ಯಮಾಪನ ಮಾಡಲು ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.



ಕಾರ್ಖಾನೆಯ ವಿನ್ಯಾಸ, ಅಪಘಾತಗಳ ಬಗ್ಗೆ ಅರಿವು, ಸುರಕ್ಷತೆಗಾಗಿ ಸಹಾಯಕ ಸಾಧನಗಳು, ಕೆಲಸದ ವಾತಾವರಣ ಮತ್ತು ಅಧಿಕ ಸಮಯ, ಅಪಾಯದಿಂದ ತಪ್ಪಿಸಿಕೊಳ್ಳುವ ವಿಧಾನಗಳು, ಸುರಕ್ಷಿತ ವಿಲೇವಾರಿ ಮತ್ತು ಅಗ್ನಿಶಾಮಕ ಸಹಾಯ, ಕೆಲಸದ ತರಬೇತಿ, ಇದೆಲ್ಲದರ ಕುರಿತು ಆ ಕೂಲಿ ಕಾರ್ಮಿಕರಿಗೆ ಶಿಕ್ಷಣ ನೀಡಬೇಕು.

ಕಾನೂನಿನ ಪ್ರಕಾರ ಕಾರ್ಮಿಕ-ರಿಗೆ ಕಲ್ಯಾಣ ಯೋಜನೆ ಸೌಲಭ್ಯಗಳು, ಸುರಕ್ಷತೆ ಮತ್ತು ಆರೋಗ್ಯವನ್ನು ಒದಗಿಸಿದರೆ, ಕಾರ್ಮಿಕರು ಅಪಾಯ ಮುಕ್ತ ವಾತಾವರಣವನ್ನು ಹೊಂದಬಹುದು.

ನಮ್ಮನ್ನೆಲ್ಲ ಖುಷಿಪಡಿಸುವ ಆ ಕೂಲಿ ಕಾರ್ಮಿಕರು ಕೂಡ ಆರೋಗ್ಯವಾಗಿ ಖುಷಿಯಿಂದ ಕಾಯಕದಲ್ಲಿ ತೊಡಗಬಹುದು.

ಲೇಖಿನ
ದರ್ಶಿನಿ ಪ್ರಸಾದ್
ವನಗೂರು
ಹಾಸನ ಜಿಲ್ಲೆ




ಸಂಜೆಯ ಕತ್ತಲಲಿ.. ಮೌನದ ಹಿನ್ನೆಲೆಯಲ್ಲಿ..

■ ಉದಯರಶ್ಮಿ ದಿನಪತ್ರಿಕೆ



ಜಯಶ್ರೀ ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

ತಿಂಗಳ ಕೊನೆಯ ಲೆಕ್ಕಪತ್ರಗಳ ಒತ್ತಡದ ನಡುವೆ, ಆ ಯಾಂತ್ರಿಕ ಕಾರ್ಯಾಲಯದ ಮೂರನೇ ಅಂತಸ್ತಿನ ಕಿರಿದಾದ ಕ್ಯೂಬಿಕಲ್ ಮೂಲೆಯಲ್ಲಿ ನೀನು ಕುಳಿತು ಕೀಬೋರ್ಡ್ ಮೇಲೆ ಬೆರಳುಗಳನ್ನು ಓಡಿಸುತ್ತಿದ್ದ ಆ ಮೊದಲ ದೃಶ್ಯ ಇಂದಿಗೂ ನನ್ನ ದೃಷ್ಟಿ ಪಟಲದಲ್ಲಿ ಅತ್ಯಂತ ನೈಜವಾಗಿ ಉಳಿದುಕೊಂಡಿದೆ. ನೀನು ನಗರದ ಯಾವುದೇ ಪ್ರಭಾವಿ ಹಿನ್ನೆಲೆಯಿಂದ ಬಂದವಳಲ್ಲ; ಹೆತ್ತವರ ಸಣ್ಣ ವ್ಯವಹಾರದ ನಷ್ಟ ಮತ್ತು ಅಣ್ಣನ ವಿದ್ಯಾಭ್ಯಾಸದ ಸಾಲದ ಕಂತುಗಳನ್ನು ನಿಭಾಯಿಸಲು, ದಿನವಿಡೀ ಕಣ್ಣುಗಳು ಸವೆಯುವಂತೆ ಆ ಹೊಳೆಯುವ ಪರದೆಯ ಮುಂದೆ ಕುಳಿತು ಕಷ್ಟಪಡುವ ಒಬ್ಬ ಸಾಮಾನ್ಯ ಮಧ್ಯಮ ವರ್ಗದ ಹೆಣ್ಣುಮಗಳು ನೀನು. ಆ ಹಳದಿ ಫ್ಲೋರಸೆಂಟ್ ಬೆಳಕಿನಲ್ಲಿ ನಿನ್ನ ಮುಖದಲ್ಲಿದ್ದ ಆ ಗಾಬರಿ ಮತ್ತು ಜವಾಬ್ದಾರಿಯ ಗಾಂಭೀರ್ಯ ನನ್ನ ಎದೆಯ ಆಳದಲ್ಲಿ ಮೌನ ತಳಮಳವನ್ನು ಸೃಷ್ಟಿಸಿತ್ತು.



ಅಂದು ನೀನು ಧರಿಸಿದ್ದ ತಿಳಿ ಬಾದಾಮಿ ವರ್ಣದ ಸರಳ ಕಾಟನ್ ಸೀರೆಯು ನಿನ್ನ ಶ್ರಮಿಕ ವ್ಯಕ್ತಿತ್ವಕ್ಕೆ ಒಂದು ಅಪೂರ್ವ ಘನತೆಯನ್ನು ತಂದಿತ್ತು. ಆ ಸಾಂಪ್ರದಾಯಿಕ ಉಡುಪಿನ ಅಂಚಿಗೆ ಅತ್ಯಂತ ಆಕರ್ಷಕವಾಗಿ ಹೊಂದುವಂತೆ ನೀನು ತೊಟ್ಟಿದ್ದ ಕಡು ಪಿಸ್ತಾ ಹಸಿರು ಬಣ್ಣದ ಖಾದಿ ರವಿಕೆಯು ನಿನ್ನ ಶಾರೀರಿಕ ಸೌಂದರ್ಯಕ್ಕೆ ಒಂದು ವಿಶಿಷ್ಟವಾದ ಕಳೆಯನ್ನು ನೀಡಿತ್ತು. ಆ ರವಿಕೆಯ ಹಿಂಭಾಗದಲ್ಲಿ ವಿನ್ಯಾಸಗೊಳಿಸಿದ್ದ ಆಳವಾದ ಚೌಕಾಕಾರದ ಕತ್ತಿನ (ಖಡಣಚಿಡಿಜ ಃಚಿಛಿಞ-ಟಿಜಛಿಞ) ಸರಳ ಅಂಚು ಮತ್ತು ಅಲ್ಲಿ ನಾಜೂಕಾಗಿ ಕಟ್ಟಿದ್ದ ಸಣ್ಣ ಹತ್ತಿ ದಾರದ ಗಂಟುಗಳು ನಿನ್ನ ಮುಖದ ಸಣ್ಣ ಚಲನೆಗೂ ತಕ್ಕಂತೆ ನಿನ್ನ ಬೆನ್ನಿನ ನುಣುಪಾದ ಚರ್ಮದ ಮೇಲೆ ಚಲಿಸುತ್ತಿದ್ದವು; ಅದು ಇಂದಿನ ಕೃತಕ ಹೊಳಪಿನ ನಡುವೆಯೂ ನೀನು ಕಾಯ್ದುಕೊಂಡಿದ್ದ ಸಾಂಪ್ರದಾಯಿಕ ಸ್ವಾಭಿಮಾನದ ಸಂಕೇತದಂತಿತ್ತು. ರವಿಕೆಯ ಮುಂಗೈವರೆಗಿನ ತೋಳುಗಳ ಅಂಚಿನಲ್ಲಿದ್ದ ಸೂಕ್ಷ್ಮವಾದ ಬಿಳಿ ದಾರದ ಹೆಣಿಗೆಯ ಕೆಲಸ ನಿನ್ನ ಸರಳತೆಯನ್ನು ಎದ್ದು ಕಾಣಿಸುತ್ತಿತ್ತು. ನಿನ್ನ ಕಿವಿಯಿಂದ ತೂಗುತ್ತಿದ್ದ ಸಣ್ಣ ಬೆಳ್ಳಿಯ ಓಲೆಗಳು ನಿನ್ನ ಮುಖದ ಸಣ್ಣ ಚಲನೆಗೂ ತಕ್ಕಂತೆ ನರ್ತಿಸುತ್ತಾ, ನಿನ್ನ ಕೆನ್ನೆಯ ಮೇಲೆ ಸಣ್ಣ ಬೆಳಕಿನ ಬಿಂಬವನ್ನು ಮೂಡಿಸುತ್ತಿದ್ದವು. ನೀನು ನಿನ್ನ ತೀಕ್ಷ್ಣವಾದ ಕಣ್ಣುಗಳನ್ನು ಕಿರಿದುಗೊಳಿಸಿ, ತಪ್ಪಾದ ಎಂಟ್ರಿಯನ್ನು ಸರಿಪಡಿಸುವ ನೆಪದಲ್ಲಿ ನನ್ನ ಕಡೆಗೆ ಕಣ್ಣು ನೆಟ್ಟು, ಬ್ಯಾಂಕಿನ ಜಪ್ತಿ ನೋಟಿಸಿನ ಕಾಗದದಂತೆ ನಡುಗುತ್ತಿದ್ದ ನಿನ್ನ ಬೆರಳುಗಳಲ್ಲಿ ಸಣ್ಣ ಪೆನ್ನನ್ನು ಬಿಗಿಯಾಗಿ ಹಿಡಿದು ನಿಂತ ಆ ವಿಶಿಷ್ಟ ಹಾವಭಾವ ನನ್ನ ಒಳಗಿನ ಮೂಕ ಆರಾಧನೆಯನ್ನು ಒಮ್ಮೆಲೇ ಹೆಚ್ಚಿಸಿತ್ತು.

ಅದೇ ಸಮಯದಲ್ಲಿ, ನನ್ನ ರೂಪದಲ್ಲೂ



ಅಂದು ದಿನವಿಡೀ ಫೈಲುಗಳನ್ನು ಜೋಡಿಸಿ ಆಡಿಟಿಂಗ್ ಮುಗಿಸಿದ ಕಠಿಣ ವಾಸ್ತವದ ಸಂಕೇತವಿತ್ತು. ನಾನು ಕಡು ಬೂದು ಬಣ್ಣದ ಒರಟು ಲಿನನ್ ಶರ್ಟ್ ಧರಿಸಿದ್ದೆ. ನನ್ನ ಕಡು ಕಪ್ಪು ದಟ್ಟವಾದ ಮೀಸೆಯ ಗಾಂಭೀರ್ಯ ಮತ್ತು ಕಛೇರಿಯ ಕಠಿಣ ಕೆಲಸಗಳಿಂದಾಗಿ ನನ್ನ ಹೆಗಲ ಇಕ್ಕೆಲಗಳಲ್ಲಿ ಎದ್ದು ಕಾಣಿಸುತ್ತಿದ್ದ ಆ ಗಟ್ಟಿಯಾದ ಮೈಕಟ್ಟು(ನಿನ್ನ ಗಮನ ಸೆಳೆದಿದ್ದರೂ, ಒಬ್ಬ ಹೆಣ್ಣಾಗಿ ನಿನ್ನ ಲಜ್ಜೆಯ ಬೇಲಿಗಳು ನಿನ್ನ ತುಟಿಗಳನ್ನು ಗಟ್ಟಿಯಾಗಿ ಮುಚ್ಚಿದ್ದವು. ನಾನು ನನ್ನ ಎರಡೂ ಹಸ್ತಗಳನ್ನು ಜೇಬಿನೊಳಗೆ ಇಟ್ಟುಕೊಂಡು ಆ ಗಾಜಿನ ಬಾಗಿಲಿನ ಸನಿಹ ಬಂದು ನಿಂತಾಗ, ನಮ್ಮ ನಡುವೆ ಯಾವುದೇ ಸಿನಿಮ್ಯಾಟಿಕ್ ಮಾತುಗಳಿರಲಿಲ್ಲ. ಕಚೇರಿಯ ಮ್ಯಾನೇಜರ್‌ನ ಕಣ್ಣುಗಳಿದ್ದರಿಂದ ನಮ್ಮ ನಡುವೆ ಯಾವುದೇ ಭೌತಿಕ ಸಾಮೀಪ್ಯಕ್ಕೆ ಅವಕಾಶವಿರಲಿಲ್ಲ, ಆದರೆ ಆ ಕಣ್ಣುಗಳ ಆಳವಾದ ನೋಟ ನಮ್ಮಿಬ್ಬರ ನಡುವಿನ ಮೂಕ ಭರವಸೆಯನ್ನು ಗಟ್ಟಿಗೊಳಿಸುತ್ತಿತ್ತು.

ಅಂದು ನಾವು ಮಾತನಾಡಲು ಕೇವಲ ಎರಡು ನಿಮಿಷ ಸಿಕ್ಕಾಗ ನಿನ್ನ ಟಾರ್ಗೆಟ್ ಮುಗಿಯದ ಆತಂಕ ಮತ್ತು ಮನೆಯ ಬಾಡಿಗೆಯ ಚಿಂತೆ ನಿನ್ನ ಧ್ವನಿಯಲ್ಲಿ ಸ್ಪಷ್ಟವಾಗಿ-ತ್ತು. "ನಾಳೆ ಬೆಳಿಗ್ಗೆಯೇ ಬ್ಯಾಂಕಿನ ಸಾಲದ ಕಂತು ಕಟ್ಟಬೇಕು, ಮ್ಯಾನೇಜರ್ ಈ ಬಾರಿ ಸಂಬಳ ಮುಂಚಿತವಾಗಿ ಕೊಡಲು ನಿರಾಕರಿಸಿದ್ದಾರೆ, ಏನು ಮಾಡಬೇಕೋ ತಿಳಿಯುತ್ತಿಲ್ಲ" ಎಂದು ನೀನು ಕಣ್ಣಾಲಿಗಳು ತುಂಬಿಕೊಂಡು ಕೇಳಿದ ಆ ಕಟು ವಾಸ್ತವಕ್ಕೆ ನನ್ನ ಬಳಿ ತಕ್ಷಣದ ಆರ್ಥಿಕ ಪರಿಹಾರವಿರಲಿಲ್ಲ. ಇಂದಿನ ಸಮಾಜದಲ್ಲಿ ಬರಿ ಪ್ರೀತಿ ಇದ್ದರೆ ಸಾಲದು, ಬದುಕಲು ಒಂದು ಗಟ್ಟಿಯಾದ ಆರ್ಥಿಕ ಅಡಿಪಾಯ ಬೇಕು ಎಂಬ ಕಟು ಸತ್ಯ ನಮಗಾಗಿಯೇ ಎದುರು ನಿಂತಿತ್ತು. ನಾನು ನಿನ್ನ ಕೈಗಳನ್ನು ಹಿಡಿದು ಸಾಂತ್ವನ ಹೇಳದಿದ್ದರೂ, "ನಾಳೆ ಸಂಜೆ ನನ್ನ ಇನ್ಸೆಂಟಿವ್ ಬರುತ್ತದೆ, ಅದರಲ್ಲಿ ಸಾಧ್ಯವಾದಷ್ಟು ಹಣವನ್ನು ನಿನಗೆ ಹೊಂದಿಸಿಕೊಡುತ್ತೇನೆ, ನೀನೇನು ಆತಂಕ ಪಡಬೇಡ ಅನ್ವಿತಾ" ಎಂದು ನೇರವಾಗಿ ಹೇಳಿದಾಗ ನಿನ್ನ ಕಣ್ಣುಗಳಲ್ಲಿ ಒಂದು ಸಣ್ಣ ಸಮಾಧಾನ ಎದ್ದು ಕಾಣಿಸುತ್ತಿತ್ತು.




"ಆ ಗಾಜಿನ ಗೂಡಿನ ಕೃತಕ ಬೆಳಕಿನಲ್ಲಿ, ಮೇಜಿನ ಮೇಲಿದ್ದ ಫೈಲನ್ನು ಎತ್ತಿಕೊಳ್ಳುವ ಆತುರದಲ್ಲಿ ನಿನ್ನ ಬೆರಳುಗಳು ನನ್ನ ಒರಟು ಹಸ್ತಕ್ಕೆ ಆಕಸ್ಮಿಕವಾಗಿ ತಗುಲಿದವು. ಆ ಒಂದು ಸಣ್ಣ ಸ್ಪರ್ಶಕ್ಕೆ ಇಡೀ ಆಫೀಸಿನ ಯಾಂತ್ರಿಕ ಸಪ್ಪಳ ಒಮ್ಮೆಲೇ ಸ್ತಬ್ಧವಾಗಿ, ನಮ್ಮಿಬ್ಬರ ಉಸಿರಾಟ ಮಾತ್ರ ಕೇಳಿಸುವಂತಿತ್ತು. ನಿನ್ನ ಇಳಕಲ್ ಸೆರಗಿನ ಅಂಚು ತಂಗಾಳಿಗೆ ತೇಲಿಬಂದು ನನ್ನ ಶರ್ಟ್‌ಗೆ ಮೃದುವಾಗಿ ಚುಂಬಿಸಿದಾಗ, ನಿನ್ನ ಚೌಕಾಕಾರದ ರವಿಕೆಯ ಹಿಂದಿನ ಆ ಸಣ್ಣ



ದಾರದ ಗಂಟು ನಿನ್ನ ಎದೆಯ ತಳಮಳಕ್ಕೆ ತಕ್ಕಂತೆ ಮೆಲ್ಲನೆ ನಡುಗುತ್ತಿತ್ತು. ನಿನ್ನ ಕಣ್ಣಾಲಿಗಳಲ್ಲಿ ಮನೆಬಾಡಿಗೆಯ ಚಿಂತೆಯಿದ್ದರೂ, ನನ್ನ ಕಣ್ಣುಗಳನ್ನು ನೇರವಾಗಿ ಮುಟ್ಟಿದ ಹಾಗಿತ್ತು. ಆ ನೋಟದಲ್ಲಿ ಜಗತ್ತಿನ ಎಲ್ಲಾ ಅಂತಸ್ತಿನ ಬೇಲಿಗಳು ಕರಗಿ ಹೋಗುವಂತಹ ಅದೃಶ್ಯ ಒಲವಿನ ಬೆಂಕಿ ಇಬ್ಬರನ್ನೂ ಒಟ್ಟಿಗೇ ಸುಡುತ್ತಿತ್ತು."

ನಮ್ಮ ಈ ಭೇಟಿ ಯಾವುದೇ ಕಾಲ್ಪನಿಕ ಲೋಕದ ಸುಂದರ ಮುಕ್ತಾಯದೊಂದಿಗೆ ಕೊನೆಗೊಳ್ಳುವುದಿಲ್ಲ. ಏಕೆಂದರೆ ವಾಸ್ತವದ ಬದುಕು ತುಂಬಾ ಒರಟು ಮತ್ತು ಕಷ್ಟಕರವಾದದ್ದು. ಸಮಾಜದ ಜಾತಿ, ಅಂತಸ್ತು ಮತ್ತು ಹೆತ್ತವರ ಒತ್ತಡದ ನಡುವೆ ನಮ್ಮ ಈ ಪ್ರೀತಿಯನ್ನು ಉಳಿಸಿಕೊಳ್ಳಬೇಕಾದರೆ ನಾವಿಬ್ಬರೂ ದಿನವೂ ಇಂತಹ ಸಣ್ಣ ಪುಟ್ಟ ಕಷ್ಟಗಳ ವಿರುದ್ಧ ಹೋರಾಡಬೇಕಾಗಿದೆ. ನಾಳೆ ದಿನ ನಾವಿಬ್ಬರೂ ಜೊತೆಯಾಗಿ ಒಂದು ಪುಟ್ಟ ಸಂಸಾರ ಹೂಡಿದಾಗ, ಮುಂಜಾನೆ ಒಟ್ಟಿಗೆ ಎದ್ದು ಬದುಕಿನ ಜವಾಬ್ದಾ-ರಿಗಳನ್ನು ಹಂಚಿಕೊಳ್ಳುವ, ಕಷ್ಟ ಬಂದಾಗ ಒಬ್ಬರಿಗೊಬ್ಬರು ಹೆಗಲಾಗಿ ನಿಲ್ಲುವ ಧೈರ್ಯ ನಮಗಿದೆ. ಭವಿಷ್ಯದಲ್ಲಿ ಎದುರಾಗುವ ಎಲ್ಲಾ ಸಾಮಾಜಿಕ ಏರುಪೇರುಗಳನ್ನು ಎದುರಿಸಿ, ಒಬ್ಬರ ಕನಸುಗಳಿಗೆ ಮತ್ತೊಬ್ಬರು ಶಕ್ತಿಯಾಗಿ ನಿಲ್ಲುವ ನೈಜ ಬದುಕಿನ ಸಹಯಾನಕ್ಕಾಗಿ ನಾನು ನನ್ನ ಇಡೀ ಪರಿಶ್ರಮವನ್ನು ಹಾಕಲು ಸಿದ್ಧನಾಗಿದ್ದೇನೆ. ಈ ಆಫೀಸಿನ ಕತ್ತಲೆ ಆವರಸುತ್ತಿದ್ದಂತೆ ನೀನು ನಿನ್ನ ಕ್ಯಾಬ್ ಕಡೆಗೆ ಹೊರಡುವ ಮುನ್ನ ನಿನ್ನ ಮುಖದಲ್ಲಿ ಮೂಡಿದ ಆ ಮೌನವಾದ ಧೈರ್ಯದ ನೋಟವೇ, ಇನ್ನುಳಿದ ಬದುಕಿನ ಕಷ್ಟಗಳನ್ನು ಒಟ್ಟಿಗೆ ಎದುರಿಸಲು ನನ್ನ ಒಳಮನಸ್ಸಿಗೆ ಸಿಕ್ಕ ನಿಜವಾದ ಭರವಸೆ.



ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

Estd. : 1997 R. No. : AR-7/RSR/18967/1997-98 ☎ : 08352-259472

ಶ್ರೀ ಶಿವಾಜಿ ಮಹಾರಾಜ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ವಿಜಯಪುರ

श्री शिवाजी महाराज को-ऑप. क्रेडिट सोसायटी लि., विजयपूर.

SHRI SHIVAJI MAHARAJ CO-OP. CREDIT SOCIETY LTD., VIJAYAPUR.

H.O. : Opp. Shri Mahalaxmi Temple, M. G. Road, VIJAYAPUR - 586 101. E-mail : shivajibank@yahoo.com

Branch : Shri Kalidas High School Complex, Athani Road, VIJAYAPUR - 586 108.

FINANCIAL POSITION

Sl. No.	Particulars	[illegible] (Rs. in Lakhs)	[illegible] (Rs. in Lakhs)
1	Share Capital	323.95	340.16
2	Deposits	7160.14	7465.68
3	Reserve & Other Funds	860.40	926.68
4	Loans & Advances	6161.55	6333.36
5	Investments	1442.82	1427.95
6	Working Capital	8304.59	8732.54
7	Net Profit	104.34	109.15

Mortgage Loan - Upto 50 Lakhs	13%
Pay Authority Loan - Upto 5 Lakhs	13%
Surety Loan - Upto 25 Thousand	15%
Overdraft Loan - Upto 15 Lakhs	13%
Cash-Credit Loan - Upto 25 Thousand	16%

Your Money Doubled In 9.5 Years (114 Months)

INVEST YOUR SURPLUS FUNDS & EARN MORE INTEREST FOR BETTER TOMORROW

LOAN FACILITIES

Housing Loan



Upto 75 Lakhs - 11%

Vehicle & Consumer Goods



Upto 20 Lakhs 13%

Gold Loan



Rs. 70,000 on per 10 Grams Gold - 12%

BOARD OF DIRECTORS





ನ.14 ರಂದು ತಿಕೋಟಾದಲ್ಲಿ 'ವಿಜ್ಞಾನ ಜಾತ್ರೆ' ಬೃಹತ್ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಗ್ರಾಮೀಣ ಭಾಗದ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಉದ್ದೇಶದಿಂದ ಇದೇ ನವೆಂಬರ್ 14 ರಂದು ಮಕ್ಕಳ ದಿನಾಚರಣೆ ದಿನ ತಿಕೋಟಾದಲ್ಲಿ 'ವಿಜ್ಞಾನ ಜಾತ್ರೆ' ಎನ್ನುವ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಇದರ ಅಂಗವಾಗಿ ಶನಿವಾರ ನಗರದಲ್ಲಿ ಪೂರ್ವಭಾವಿ ಸಭೆ ನಡೆಸಿ ಹಲವು ರೂಪುರೇಷೆಗಳನ್ನು ತಯಾರಿಸಲಾಯಿತು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಈ ಜಾತ್ರೆಯಲ್ಲಿ ಉಪಸ್ಥಿತರಿರಲಿದ್ದು, ತಿಕೋಟಾ ತಾಲೂಕಿನ ಸರಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ವಿದ್ಯಾರ್ಥಿಗಳು, ಎಸ್.ಡಿ.ಎಂ.ಸಿ ಪದಾಧಿಕಾರಿಗಳು, ಪಾಲಕರು ಮತ್ತು ಮೇಳಕ್ಕೆ ಭೇಟಿ ಕೊಡುವವರು ಸೇ-ರಿದಂತೆ ಸುಮಾರು 10 ಸಾವಿರ ಜನರು ಇದರಲ್ಲಿ ಭಾಗವಹಿಸಲಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಅವರು ಸಭೆಯಲ್ಲಿ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ(ಗ್ರಾಮೀಣ ವಲಯ), ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆ ಮತ್ತು ಅಗಸ್ತ್ಯ ಫೌಂಡೇಶನ್ ಸಹಯೋಗದಲ್ಲಿ ಈ ವಿಜ್ಞಾನ ಜಾತ್ರೆ ನಡೆಯಲಿದೆ.

ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಮತ್ತು ಸಂಶೋಧನಾ ಶಕ್ತಿಯನ್ನು ಹೆಚ್ಚಿಸುವ ಮಹತ್ತರ ಉದ್ದೇಶದಿಂದ ಇದನ್ನು ನಡೆಸಲಾಗುತ್ತಿದೆ. ಮಕ್ಕಳು ತಮ್ಮ ನವೀನ ಆವಿಷ್ಕಾರಗಳ ಮಾದ-ರಿಯನ್ನು ಪ್ರದರ್ಶಿಸಲು ಈ ನೂತನ ವೇದಿಕೆ ಒದಗಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಅಂದು ಬೆಳಗ್ಗೆ 9 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಮಧ್ಯಾಹ್ನ 12 ಗಂಟೆಯಿಂದ ಸಚಿವರು ಸೇರಿದಂತೆ ಅನೇಕ ಗಣ್ಯರು ಭಾಗಿಯಾಗುವ ಸಾರ್ವಜನಿಕ ಸಭೆ ನಡೆಯಲಿದೆ. ನೂರಕ್ಕೂ ಹೆಚ್ಚು ಸ್ಟಾಲ್‌ಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಮ್ಮ ಸಂಶೋಧನೆಗಳನ್ನು ಪ್ರದರ್ಶಿಸಲಿದ್ದಾರೆ. ಬರುವವರಿಗೆ ಭೋಜನ ವ್ಯವಸ್ಥೆಯೂ ಸೇರಿ ಈ ಸಂಬಂಧ ನಡೆಸಬೇಕಾದ ತಯಾರಿ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

200ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದು, ವಿಜ್ಞಾನ ಪ್ರದರ್ಶನ ನಡೆಸುವ ಮಕ್ಕಳಿಗೆ ಬಹುಮಾನ ನೀಡಲಾಗುತ್ತದೆ. ತೀರ್ಪುಗಾರರು ಈ ಮಕ್ಕಳನ್ನು ಆಯ್ಕೆ ಮಾಡಲಿದ್ದು, ಪ್ರಾಥ-'ಮಿಕ ಮತ್ತು ಪ್ರೌಢ ಶಾಲೆಯ ವಿಭಾಗದಲ್ಲಿ ತಲಾ ಮೂರು ಬಹುಮಾನಗಳಿವೆ. ಮೊದಲ ಬಹುಮಾನ ರೂ. 25 ಸಾವಿರ, ದ್ವಿತೀಯ ಬಹುಮಾನವಾಗಿ ರೂ. 15 ಸಾವಿರ ಹಾಗೂ ತೃತೀಯ ಬಹುಮಾನ ರೂ. 10 ಸಾವಿರ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಇದು ನಿಜವಾದ ಜಾತ್ರೆ ರೂಪ ಪಡೆಯಬೇಕು. ಇದು ರಾಜ್ಯದ ಗಮನ ಸೆಳೆಯಬೇಕು ಹಾಗೂ ಸಂಬಂಧಿತ ಇಲಾಖೆಗಳ ಸಹಕಾರ ಪಡೆಯಲು ನಿರ್ಧರಿಸಲಾಯಿತು. ಜೊತೆಗೆ ಪವಾಡ ಬಯಲು ಕಾರ್ಯಕ್ರಮ ನಡೆಸಿ ಜಾಗೃತಿ ಮೂಡಿಸಲು ಮತ್ತು ಬರುವ ಮಕ್ಕಳಿಗೆ ಒಂದೊಂದು ಪುಸ್ತಕ ನೀಡಲು, ಮಹಿಳಾ ಸಂಘಗಳ ಪಾಲ್ಗೊಳ್ಳಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.

ಈ ಸಂದರ್ಭದಲ್ಲಿ ಕೈಗಾ-ರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಮಹಾಂತೇಶ ಬಿರಾದಾರ, ಅಗಸ್ತ್ಯ ಫೌಂಡೇಶನ್‌ನ ಉತ್ತರ ಕರ್ನಾಟಕ ವಿಭಾಗದ ಸಂಯೋಜನಾಧಿಕಾರಿ ಗೀತಾ ಪಾಟೀಲ, ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿ ಎಂ. ಎನ್. ಚೋರಗಸ್ತಿ, ಎಂ. ಸಿ. ತಳವಾರ, ಬಿ.ಎನ್. ಭೋಸ್ಲೆ ಹಾಗೂ ಬಿಇಓ ಕಚೇರಿ ಅಧಿಕಾರಿ ವಸಂತ ಚವ್ಹಾಣ ಉಪಸ್ಥಿತರಿದ್ದರು.

ಎಂಸಿಎ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಎಂಸಿಎ ಕೋರ್ಸ್ನ ಉಳಿದಿರುವ ಸೀಟುಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆಯಾದ ಸೀಟುಗಳಲ್ಲಿ ಉಳಿದಿರುವ ಸೀಟುಗಳಿಗೆ ಆಸಕ್ತ ಅಭ್ಯರ್ಥಿಗಳು ಯುಯುಸಿಎಂಎಸ್ (UUCMS) ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿಗದಿಪಡಿಸಿರುವ ಶುಲ್ಕವನ್ನಷ್ಟೇ ಪಾವತಿಸಬೇಕು.

ಅರ್ಜಿ ಸಲ್ಲಿಸಲು ನ. 16 ಕೊನೆಯ ದಿನವಾಗಿದ್ದು. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ kswu.ac.in ಅಥವಾ ಗಣಕ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಅಜೀಜ್ ಮಕಾಂದಾರ ಅವರನ್ನು 9845051097, 9886299982 ಮೂಲಕ ಸಂಪರ್ಕಿಸಬಹುದು ಎಂದು ವಿಶ್ವವಿದ್ಯಾನಿಲಯದ ಪ್ರಕಟಣೆ ತಿಳಿಸಿದೆ.



ನ.17 ಹಾಗೂ 18ರಂದು ಕಲಾ ಪ್ರತಿಭೋತ್ಸವ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಕ್ಕಳ ಹಾಗೂ ಯುವಜನರಲ್ಲಿರುವ ಕಲಾ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ಕಲಾ ಪ್ರತಿಭೋತ್ಸವ ಕಾರ್ಯಕ್ರಮವನ್ನು ನವೆಂಬರ್ 17 ಹಾಗೂ 18ರಂದು ವಿಜಯಪುರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಬಾಲ ಪ್ರತಿಭೆ, ಕಿಶೋರ ಪ್ರತಿಭೆ ಹಾಗೂ ಯುವ ಪ್ರತಿಭೆಗಳ ವಿಭಾಗಗಳಲ್ಲಿ ಭಾಗವಹಿಸಲು ಆಸಕ್ತರು ಅಗತ್ಯ ದಾಖಲೆಗಳ ಸಹಿತ ನವೆಂಬರ್ 13ರ ಸಂಜೆ 5.30ರೊಳಗೆ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ, ಸ್ಟೇಷನ್ ರಸ್ತೆ, ವಿಜಯಪುರ ಇಲ್ಲಿಗೆ ಖುದ್ದಾಗಿ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ತಾಲ್ಲೂಕಿನ ಸ್ಥಿರಾಸ್ತಿಗಳ ಪರಿಷ್ಕೃತ ದರಪಟ್ಟಿ ಪ್ರಕಟ ನ.28ರವರೆಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27ನೇ ಸಾಲಿನ ಸ್ಥಿರಾಸ್ತಿಗಳ ಮಾರುಕಟ್ಟೆ ಮಾರ್ಗಸೂಚಿ ದರ ಪರಿಷ್ಕರಣೆ ಪ್ರಕ್ರಿಯೆಯಡಿ ಬಸವನ ಬಾಗೇವಾಡಿ, ನಿಡಗುಂದಿ ಹಾಗೂ ಕೊಲ್ಹಾರ ತಾಲ್ಲೂಕುಗಳ ಸ್ಥಿರಾಸ್ತಿಗಳ ಪರಿಷ್ಕೃತ ದರಪಟ್ಟಿಯನ್ನು ನವೆಂಬರ್ 7ರಂದು ಪ್ರಕಟಿಸಲಾಗಿದೆ.

ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ, ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳು–2013ರ ನಿಯಮ 6(1)ರ ಅನ್ವಯ ದರಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಪರಿಷ್ಕೃತ ದರಪಟ್ಟಿಯ ಕರಡು ಪ್ರತಿಯನ್ನು ಬಸವನಬಾಗೇವಾಡಿ ನೋಂದಣಾಧಿಕಾರಿಗಳ ಕಚೇರಿ, ತಹಶೀಲ್ದಾರ್ ಕಾರ್ಯಾಲಯ, ಪುರಸಭೆ ಕಾರ್ಯಾಲಯ ಹಾಗೂ ತಾಲ್ಲೂಕು ಮತ್ತು ಪಟ್ಟಣ ಪಂಚಾಯಿತಿ ಕಾರ್ಯಾಲಯಗಳಲ್ಲಿ ಸಾರ್ವಜನಿಕರ ಅವಲೋಕನಕ್ಕಾಗಿ ಪ್ರಕಟಿಸಲಾಗಿದೆ. ದರಪಟ್ಟಿಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ನವೆಂಬರ್ 9ರಿಂದ 28ರವರೆಗೆ ಲಿಖಿತ ರೂಪದಲ್ಲಿ ನೋಂದಣಾಧಿಕಾರಿಗಳು ಹಾಗೂ ಮಾರುಕಟ್ಟೆ ಮೌಲ್ಯ ನಿರ್ಧರಣಾ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಬಸವನ ಬಾಗೇವಾಡಿ ಇವರಿಗೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶಾಸಕ ಬಸನಗೌಡ ರ 6 ತಿಂಗಳ ವೇತನ ಸಿಎಂ ಪರಿಹಾರ ನಿಧಿಗೆ

ಮುಖ್ಯಮಂತ್ರಿಗಳ ಕಾರ್ಯದರ್ಶಿಗೆ 6 ತಿಂಗಳ ವೇತನವಾದ ರೂ.4.83 ಪರಿಹಾರ ಚೆಕ್ ಹಸ್ತಾಂತರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ತಮ್ಮ 6 ತಿಂಗಳ ವೇತನವಾದ ರೂ.4.83 ಲಕ್ಷ ಚೆಕ್‌ನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿ (ಬರ ಪರಿಹಾರ) ಶಾಖೆಗೆ ಶನಿವಾರ ಮುಖ್ಯಮಂತ್ರಿಗಳ ಕಾರ್ಯದರ್ಶಿ ಭುವನೇಶ್ವರಯ್ಯ ಅವರ ಮೂಲಕ ಹಸ್ತಾಂತರಿಸಿದರು.

ರಾಜ್ಯದಲ್ಲಿ ಮಳೆಯ ಅಭಾವದಿಂದ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು, ಇದರಿಂದಾಗಿ ಅನ್ನದಾತರು ಬೆಳೆ ಬೆಳೆಯಲು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ವಿಷಯ ಕುರಿತು ಚರ್ಚಿಸಲು ಸೆಪ್ಟೆಂಬರ್ ತಿಂಗಳಲ್ಲಿ ಕರೆಯಲಾದ ವಿಶೇಷ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ರೈತರ ಪ್ರತಿ ಕುಟುಂಬಕ್ಕೆ ಕೇವಲ ರೂ.2,500 ಸಂಕಷ್ಟದಲ್ಲಿರುವ ರೈತರಿಗೆ ಹೆಚ್ಚಿನ ಪರಿಹಾರ ಮೊತ್ತ ಘೋಷಿಸಬೇಕೆಂದು ಆಗ್ರಹಿಸಿ ಸಾವಿರಾರು ಸಂಖ್ಯೆಯ ರೈತರೊಂದಿಗೆ ವಿಜಯಪುರ ನಗರದ ಸಿದ್ದೇಶ್ವರ ದೇವಸ್ಥಾನದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಬೃಹತ್ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ, ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ ಬಳಿಕ ರೈತರನ್ನು ಉದ್ದೇಶಿಸಿ ಮಾತನಾಡುವಾಗ ಬೀಕರ ಬರದಿಂದ ಕಷ್ಟದಲ್ಲಿರುವ ರೈತರಿಗೆ ಹೆಚ್ಚಿನ ಬರ ಪರಿಹಾರ ನೀಡಲು ರಾಜ್ಯ ಸರ್ಕಾರಕ್ಕೆ ಆರ್ಥಿಕ ತೊಂದರೆ ಆಗುತ್ತಿದ್ದರೆ, ಅವರ ನೆರವಿಗಾಗಿ ತಮ್ಮ 6 ತಿಂಗಳ ವೇತನವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿ (ಬರಗಾಲ)ಗೆ ನೀಡುವುದಾಗಿ ಘೋಷಿಸಿದ್ದರು.

ಅದರಂತೆ ಶನಿವಾರ ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಹೆಸರಿನಲ್ಲಿರುವ ರೂ.4.83 ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅನ್ನು ಘೋಷಿಸಿದ್ದರು. ಆಗ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳರು ಹೆಚ್ಚಿನ ಪರಿಹಾರ ಘೋಷಣೆಗೆ ಸರ್ಕಾರಕ್ಕೆ ಆಗ್ರಹಿಸಿದ್ದರು. ಅಲ್ಲದೆ, ಮುಖ್ಯಮಂತ್ರಿಗಳ ಕಾರ್ಯದರ್ಶಿ ಅವರಿಗೆ ಹಸ್ತಾರಿಸಿ, ಸಂಕಷ್ಟದಲ್ಲಿರುವ ಅನ್ನದಾತರಿಗೆ ನೆರವಾಗಿದ್ದಾರೆ.

ಮಠಾಧೀಶರ ಒಕ್ಕೂಟದ ಚಿಂತನ ಮಂಥನ ಸಭೆ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಮಾನವ ಧರ್ಮದ ಒಳಿತು ಹಾಗೂ ಭಾರತೀಯ ಆಚಾರ, ವಿಚಾರ, ಪರಂಪರೆಯ ಬೆಳವಣಿಗೆಗಾಗಿ ಮಾಠಾಧೀಶರು ಚಿಂತನೆ ಮಾಡುವುದು ಅಗತ್ಯವಾಗಿದೆ ಎಂದು ಕೋರವಾರ ಹಿರೇಮಠದ ತಪೋರತ್ನ ಬಸವಲಿಂಗ ಶಿವಾಚಾರ್ಯರು ಹೇಳಿದರು.

ಪಟ್ಟಣದ ಜಡಿಮಠದಲ್ಲಿ ಶನಿವಾರ ಜರುಗಿದ ದೇವರಹಿಪ್ಪರಗಿ–ತಾಳಿಕೋಟ ತಾಲ್ಲೂಕುಗಳ ಮಠಾಧೀಶರ ಒಕ್ಕೂಟದ ಚಿಂತನ ಮಂಥನ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಇಂದು ಧರ್ಮದ ತಳಹದಿಯ ಮೇಲೆ ವೈಚಾರಿಕ ನೆಲೆಗಟ್ಟಿನ ಮೂಲಕ ಪ್ರತಿಯೊಬ್ಬರ ಬಾಳು, ಬದುಕು, ಬರಹ ಬೆಳವಣಿಗೆಯಾಗಬೇಕು. ಈ ನಿಟ್ಟಿನಲ್ಲಿ ಸಮುದಾಯಗಳಿಗೆ ಮಠಾಧೀಶರ ಮಾರ್ಗದರ್ಶನ ಅಗತ್ಯ. ಅದಕ್ಕಾಗಿ ನಾವು ಸಹ ಚಿಂತನಶೀಲರಾಗಿ, ಸಮಾಜದ ಧ್ವನಿಯಾಗಿ ಕಾರ್ಯನಿರ್ವಹಿಸೋಣ ಎಂದರು.

ಸಭೆಯಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಸಾಮಾಜಿಕ, ಧಾರ್ಮಿಕ ಕಾರ್ಯಗಳ ಕುರಿತು ಚರ್ಚಿಸಲಾಯಿತು.

ಇದೇ ಸಂದರ್ಭದಲ್ಲಿ ಮಹಾರಾಷ್ಟ್ರ ಶಿವಾಚಾರ್ಯ ಸಂಸ್ಥೆಯ ರಾಜ್ಯಾಧ್ಯಕ್ಷರಾದ ಕೋರವಾರ ಹಿರೇಮಠದ ತಪೋರತ್ನ ಬಸವಲಿಂಗ ಶಿವಾಚಾರ್ಯರರನ್ನು ಸನ್ಮಾನಿಸಲಾಯಿತು.

ದೇವೂರ ಮರುಳಾರಾಧ್ಯ ಶಿವಾಚಾರ್ಯರು, ಸಾಸನೂರ ಮಹಾಂತಲಿಂಗ ಸ್ವಾಮೀಜಿ, ನಾವದಗಿ ರಾಜಗುರು ರಾಜೇಂದ್ರಶ್ರೀ, ಕಲಕೇರಿ ಸಿದ್ಧರಾಮಶ್ರೀ, ಸ್ಥಳೀಯ ಜಡೇಸಿದ್ಧೇಶ್ವರಶ್ರೀ, ಮಹಾಂತ ಸ್ವಾಮೀಜಿ, ಕೆಸರಟ್ಟಿ ಸೋಮಲಿಂಗ ಸ್ವಾಮೀಜಿ, ಕಡಕೋಳ ಮಡಿವಾಳೇಶ್ವರಶ್ರೀ, ಹರನಾಳ, ನಿವಾಳಖೇಡ ಸಂಗನಬಸವ ಸ್ವಾಮೀಜಿ, ಕೆರೂಟಗಿ ಶಿವಬಸವ ಸ್ವಾಮೀಜಿ ಇದ್ದರು.

ದತ್ತಾತ್ರೇಯ ದೇವಾಲಯದ ಸ್ತಬ್ಧಚಿತ್ರಕ್ಕೆ ಪ್ರಥಮ ಸ್ಥಾನ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಕನ್ನಡ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 1ರಂದು ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಸ್ತಬ್ಧಚಿತ್ರಗಳ ಮೆರವಣಿಗೆಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದ ವತಿಯಿಂದ ರೂಪಿಸಲಾದ ಚಟ್ಟರಕಿ ಗ್ರಾಮದ ಐತಿಹಾಸಿಕ ಶ್ರೀ ದತ್ತಾತ್ರೇಯ ದೇವಾಲಯದ ಸ್ತಬ್ಧಚಿತ್ರವು ಪ್ರಥಮ ಸ್ಥಾನ ಪಡೆದು ಗಮನ ಸೆಳೆದಿದೆ.

ಕನ್ನಡ ರಾಜ್ಯೋತ್ಸವ ಮೆರವಣಿಗೆಯಲ್ಲಿ 12ನೇ ಶತಮಾನದ ಕಲ್ಯಾಣಿ ಚಾಲುಕ್ಯರ ಕಾಲದ ಚಟ್ಟರಕಿ ದೇವಾಲಯದ ಪರಂಪರೆ, ವೈಶಿಷ್ಟ್ಯಕ್ಕೆ ಜನಮೆಚ್ಚುಗೆ

ದೇವರಹಿಪ್ಪರಗಿ ತಾಲೂಕಿನ ಚಟ್ಟರಕಿ ಗ್ರಾಮದಲ್ಲಿರುವ 12ನೇ ಶತಮಾನದ ಕಲ್ಯಾಣಿ ಚಾಲುಕ್ಯರ ಕಾಲದ ಶ್ರೀ ದತ್ತಾತ್ರೇಯ ದೇವಾಲಯದ ಐತಿಹಾಸಿಕ ಹಿನ್ನೆಲೆ, ಧಾರ್ಮಿಕ ಪರಂಪರೆ ಹಾಗೂ ವಾಸ್ತುಶಿಲ್ಪದ ವೈಶಿಷ್ಟ್ಯವನ್ನು ಬಿಂಬಿಸುವಂತೆ ಸ್ತಬ್ಧಚಿತ್ರವನ್ನು ವಿನ್ಯಾಸಗೊಳಿಸಲಾಗಿತ್ತು.

ಜಿಲ್ಲೆಯ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಈ ಸ್ತಬ್ಧಚಿತ್ರವು ಮೆರವಣಿಗೆಯಲ್ಲಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿ ಪ್ರಥಮ ಬಹುಮಾನ ಗಳಿಸಿದೆ. ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ. ಪಾಟೀಲ ಅವರು ಪ್ರಥಮ ಬಹುಮಾನವನ್ನು ಪ್ರದಾನ ಮಾಡಿದರು.

ಈ ಸಾಧನೆಗೆ ಕಾರಣರಾದ ವಿಭಾಗೀಯ ನಿಯಂತ್ರಣಾಧಿಕಾರಿ ಡಿ.ಎ. ಬಿರಾದಾರ, ವಿಭಾಗೀಯ ಸಾರಿಗೆ ಅಧಿಕಾರಿ ಎಂ.ಎಸ್. ಹಿರೇಮಠ, ವಿಭಾಗೀಯ ತಾಂತ್ರಿಕ ಅಧಿಕಾರಿ ಎ.ಎಚ್. ಮದಭಾವಿ ಸೇರಿದಂತೆ ನಿಗಮದ ಎಲ್ಲ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂದಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಸ್ತಬ್ಧಚಿತ್ರದ ಪರಿಕಲ್ಪನೆ ಮತ್ತು ನಿರ್ಮಾಣ ಕಾರ್ಯಕ್ಕೆ ಸಹಕರಿಸಿದ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ಕನ್ನಡ ಕ್ರಿಯಾ ಸಮಿತಿಯ ಶಿವರಾಯ ಬೈಚಬಾಳ, ಬಸಲಿಂಗಪ್ಪ ಅಂಗಡಿ ಸೇರಿದಂತೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲಾಗಿದೆ ಎಂದು ವಿಜಯಪುರ ವಿಭಾಗದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.



ಪ್ರತಿಭಾ ಕಾರಂಜಿ: ಜಾಲಗೇರಿ ಶಾಲೆಯ ವಿದ್ಯಾರ್ಥಿಗಳ ಸಾಧನೆ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದಲ್ಲಿ ಜಾಲಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ನ.4ರಂದು ಜಾಲಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದಲ್ಲಿ ಶಾಲೆಯ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಿ ಗಮನ ಸೆಳೆದರು.

ಹಿರಿಯರ ವಿಭಾಗದಲ್ಲಿ ರಾಹುಲ ರಾಜಪ್ಪ ಕಾಂಬಳೆ (ಪ್ರಬಂಧ ಸ್ಪರ್ಧೆ), ಪ್ರಿಯಾಂಕ ಸಿದ್ದನಗೌಡ ಪಾಟೀಲ (ಧಾರ್ಮಿಕ ಪಠಣ), ರೂಪಾ ಅಮಿತ ಚವ್ಹಾಣ (ಅಭಿನಯ ಗೀತೆ), ಸಾನ್ವಿ ಸಂದಿಮನಿ (ಆಶುಭಾಷಣ), ಕೀರ್ತಿ ಹಂಡಗಿ (ಚಿತ್ರಕಲೆ) ಪ್ರಥಮ ಸ್ಥಾನ ಪಡೆದರು. ಕಿರಿಯರ ವಿಭಾಗದಲ್ಲಿ ದೀಕ್ಷಾ ಹೊಸಮನಿ (ಕನ್ನಡ ಕಂಠಪಾಠ), ಪಲ್ಲವಿ ತಿಪ್ಪಣ್ಣ ಸಂದಿಮನಿ (ಚಿತ್ರಕಲೆ), ಸಮಂತಾ ದೊಡಮನಿ (ಛದ್ಮವೇಷ), ಸ್ವಾತಿ ದೊಡಮನಿ (ಕಥೆ ಹೇಳುವುದು) ಪ್ರಥಮ ಸ್ಥಾನ ಗಳಿಸಿ ತಾಲೂಕು ಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸರ್ವಸದಸ್ಯರು, ಗ್ರಾಮದ ಗುರುಹಿರಿಯರು, ಶಾಲೆಯ ಮುಖ್ಯಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಚಡಚಣದಲ್ಲಿ ನಡೆದ ದುರ್ಘಟನೆ । ಎರಡು ಟ್ರಾಲಿಗಳಿಗೂ ವ್ಯಾಪಿಸಿದ ಬೆಂಕಿ । ಅಗ್ನಿಶಾಮಕ ವಾಹನ ಇಲ್ಲದೆ ಸಾರ್ವಜನಿಕರ ಪರದಾಟ

ಬೆಂಕಿ ಅವಘಡ: 50 ಸಾವಿರ ಮೌಲ್ಯದ ಮೇವು ಭಸ್ಮ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಪಟ್ಟಣದ ಶಿವಾಜಿ ಸರ್ಕಲ್ ಬಳಿ ಶನಿವಾರ ಬೆಳಿಗ್ಗೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಸುಮಾರು 50 ಸಾವಿರ ಮೌಲ್ಯದ ಜೋಳದ ಮೇವು (ಕಣಕಿ) ಸುಟ್ಟು ಕರಕಲಾಗಿದೆ. ರೈತ ವಿಠ್ಠಲ ಉಂಬರಜಿ ಅವರಿಗೆ ಸೇರಿದ ಮೇವು ಬೆಂಕಿಗಾಹುತಿಯಾಗಿದ್ದು, ಟ್ರ್ಯಾಕ್ಟರ್ ಚಾಲಕನ ಸಮಯಪ್ರಜ್ಞೆಯಿಂದ ಹೆಚ್ಚಿನ ಅನಾಹುತ ತಪ್ಪಿದೆ. ಇಂಡಿಯಿಂದ ಮಹಾರಾಷ್ಟ್ರದ ಮಂಗಳವೇಡಾ ತಾಲೂಕಿನ ಚಿಕ್ಕಲಗಿ ಗ್ರಾಮದತ್ತ ಜೋಳದ ಮೇವು ತುಂಬಿಕೊಂಡು ಟ್ರ್ಯಾಕ್ಟರ್ ಎಮ್.ಎಚ್.13ಇ ಕೆ 1548 ತೆರಳುತ್ತಿತ್ತು. ಈ ವೇಳೆ ಶಿವಾಜಿ ಸರ್ಕಲ್ ಬಳಿ ಟ್ರ್ಯಾಕ್ಟರ್‌ನ ಒಂದು ಗಾಲಿ ಪಂಕ್ಚರ್ ಆಗಿದ್ದರಿಂದ ಚಾಲಕ ವಾಹನ ನಿಲ್ಲಿಸಿ ಪಂಕ್ಚರ್ ಸರಿಪಡಿಸಿಕೊಂಡಿದ್ದನು. ಬಳಿಕ ಪ್ರಯಾಣ ಮುಂದುವರಿಸಲು ಸಿದ್ಧವಾಗುತ್ತಿದ್ದಂತೆ ಒಂದು ಟ್ರಾಲಿಯಲ್ಲಿದ್ದ ಮೇವು ಬೆಂಕಿಗೆ ಆಹುತಿಯಾಗಿದೆ. ಕ್ಷಣಾರ್ಧದಲ್ಲಿ ಬೆಂಕಿ ಮತ್ತೊಂದು ಟ್ರಾಲಿಗೂ ವ್ಯಾಪಿಸಿ ಸಂಪೂರ್ಣ ಮೇವು ಸುಟ್ಟು ಕರಕಲಾಗಿದೆ.

ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಚಾಲಕ ಸಮಯಪ್ರಜ್ಞೆ ಮೆರೆದು ಟ್ರ್ಯಾಕ್ಟರ್‌ನ್ನು ಟ್ರಾಲಿಗಳಿಂದ ಬೇರ್ಪಡಿಸಿದ್ದಾನೆ. ಇದರಿಂದ ಟ್ರ್ಯಾಕ್ಟರ್‌ಗೆ ಬೆಂಕಿ ವ್ಯಾಪಿಸುವುದು ತಪ್ಪಿದೆ. ಅಗ್ನಿ ಅವಘಡದಿಂದಾಗಿ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಗಿ ಟ್ರಾಫಿಕ್ ಜಾಮ್ ಸಂಭವಿಸಿತು. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಚಡಚಣ ಪೊಲೀಸರು ವಾಹನ ಸಂಚಾರವನ್ನು ನಿಯಂತ್ರಿಸಿ, ಟ್ರಾಫಿಕ್ ವ್ಯವಸ್ಥೆಯನ್ನು ಸರಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಪಟ್ಟಣದಲ್ಲಿ ಅಗ್ನಿಶಾಮಕ ವಾಹನದವ್ಯವಸ್ಥೆಇಲ್ಲದಿರುವುದರಿಂದ ಬೆಂಕಿ ನಂದಿಸಲು ತಕ್ಷಣ ನೆರವು ದೊರೆಯಲಿಲ್ಲ. ಬಳಿಕ ಸ್ಥಳೀಯ ನೀರಿನ ಟ್ಯಾಂಕರ್‌ಗಳ ಸಹಾಯದಿಂದ ಸಾರ್ವಜನಿಕರು ಬೆಂಕಿ ನಂದಿಸಿದರು. ಅಗ್ನಿಶಾಮಕ ವಾಹನ ಇಂಡಿಯಿಂದ ಚಡಚಣಕ್ಕೆ ಬರಲು ಸುಮಾರು ಒಂದು ಗಂಟೆ ಬೇಕಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಸ್ಥಳೀಯರೇ ಬೆಂಕಿ ನಂದಿಸುವ ಪ್ರಯತ್ನ ನಡೆಸಿದರು. ಅಗ್ನಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ.

Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR